ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 19 ಜುಲೈ 22, 1979 40 ಪೈಸೆ

ಸುಭದ್ರ ಸರ್ಕಾರ?

ಸಂಪಾದಕೀಯ

ಮೊರಾರ್ಜಿ ದೇಸಾಯಿಯವರು ತನ್ನ ಸರಕಾರದ ವಿರುದ್ಧ ವಿರೋಧ ಪಕ್ಷವಾದ ಸ್ವರಣಸಿಂಗ್ ಕಾಂಗ್ರೆಸ್ ಮಂಡಿಸಿದ್ದ ಅವಿಶ್ವಾಸ ನಿರ್ಣಯವು ನೂರಕ್ಕೂ ಹೆಚ್ಚು ಮತಗಳಿಂದ ಬಿದ್ದುಬಿಡುತ್ತೆ ಎಂದು ಧೈರ್ಯವಾಗಿ ಹೇಳುತ್ತಿದ್ದಂತೆಯೇ ಪ್ರಧಾನಿ ಪಟ್ಟಕ್ಕೆ ರಾಜಿನಾಮೆ ಕೊಡಬೇಕಾಗಿ ಬಂತು. ಪ್ರಧಾನಿಯವರಾದ ದೇಸಾಯಿಯವರೂ ಸೇರಿ ಅನೇಕ ಜನತಾಪಕ್ಷದ ಮುಖಂಡರುಗಳು ಅವಿಶ್ವಾಸ ನಿರ್ಣಯವೇ ಸೋಲುವುದೆಂದು ನಂಬಿದ್ದರು. ಕರ್ನಾಟಕದ ಜನತಾಪಕ್ಷದ ಮುಖಂಡರೊಬ್ಬರು "ಪವಾಡದ ರೀತಿಯಲ್ಲಿ ಸರಕಾರದ ವಿರುದ್ಧ ಮಂಡಿಸಲಾದ ಅವಿಶ್ವಾಸ ನಿರ್ಣಯವು ಸೋಲುವುದೆಂದು" ದಾವಣಗೆರೆಯಲ್ಲಿ ಸಾರಿದ್ದರು. ಆದರೆ ಈ ಹಿಂದಿನ ಸಂಪಾದಕೀಯದಲ್ಲಿ ಹೇಳಿದಂತೆ, ಅವಿಶ್ವಾಸ ನಿರ್ಣಯದ ಮೇಲೆ ಮತ ಚಲಾಯಿಸುವುದಕ್ಕೆ ಮೊದಲೇ ಸರಕಾರದ ಪತನವಾಗಿದೆ.

ಚುನಾವಣೆಗಳಲ್ಲಿ ಜನತೆಗಿತ್ತ ಆಶ್ವಾಸನೆಗಳನ್ನು ಪೂರೈಸುವತ್ತ ಒಂದಿಷ್ಟೂ ಗಮನವೀಯದೆ, ತನ್ನ ಪಕ್ಷವೆಂದರೆ ಸರ್ವಾಧಿಕಾರ ಶಕ್ತಿಗಳ ವಿರುದ್ಧ ಹೋರಾಟ ಮಾಡಲಿರುವ ಒಂದು ಕೂಟ ಎಂಬ ಅಂಶವನ್ನೂ ಮರೆತು, ಸರ್ವಾಧಿಕಾರ ಶಕ್ತಿಗಳಿಗೆ ಅನುಕೂಲ ವಾತಾವರಣವನ್ನು ಉಂಟು ಮಾಡುವ ಧೋರಣೆಗಳನ್ನು ಅನುಸರಿಸಿದ್ದರಿಂದಲೂ, ಸುಭದ್ರ ಸರಕಾರ ಕೊಡಲು ವಿಫಲವಾದುದರಿಂದಲೂ ಜನತೆಯು ಜನತಾಪಕ್ಷದಿಂದ ದೂರ ಸರಿಯುವುದು ಪ್ರಾರಂಭವಾಗಿತ್ತು. ಇದು ಒಂದೆಡೆಯಾದರೆ, ಜನತಾಪಕ್ಷದೊಳಗೆ ಸಂಘಟನೆಯ ಹಿಡಿತವು ಜನಸಂಘ, ಆರ್.ಎಸ್.ಎಸ್. ಕೂಟದ ಕೈಗೆ ಹೋಗುತ್ತಿದ್ದುದರ ಪರಿಣಾಮ ಒಳಜಗಳವೂ ತೀವ್ರವಾಗಿತ್ತು. ಒಳಜಗಳಗಳಿಗೆ ಸೈದ್ಧಾಂತಿಕ ಮತ್ತು ವೈಯುಕ್ತಿಕ ಕಾರಣಗಳೂ, ಅಧಿಕಾರ ದಾಹವೂ ಇರಬಹುದು. ಅಂತೂ, ಅವಿಶ್ವಾಸ ನಿರ್ಣಯ ಮಂಡಿಸಿದ ಹಿನ್ನೆಲೆಯಲ್ಲಿ, ರಾಜ್‌ನಾರಾಯಣ ಅವರ ಬಂಡಾಯದ ಪರಿಣಾಮ ಮತ್ತು ಎಡಪಕ್ಷಗಳ ಸಮಯೋಚಿತ ನಿಲುವುಗಳಿಂದಾಗಿ ದೇಸಾಯಿಯವರು ರಾಜಿನಾಮೆ ಕೊಡಬೇಕಾಯಿತು. ಮುಂದಿನ ರಾಜಕೀಯ ಬೆಳವಣಿಗೆಯು ಸಧ್ಯದ ಪರಿಸ್ಥಿತಿಯಲ್ಲಿ ಅನಿಶ್ಚಿತತೆಯಿಂದ ಕೂಡಿದೆ. ಯಾರೇ ಆಗಲಿ ಸರಕಾರವನ್ನು ರಚಿಸಿದರೆ, ಅದು ಹೆಚ್ಚು ಕಾಲ ಭದ್ರವಾಗಿರುವುದು ಸಾಧ್ಯವಿಲ್ಲ.

[ಕಡೆಯ ಪುಟ ನೋಡಿ]

ಸಾರ್ವಜನಿಕ ಕ್ಷೇತ್ರ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶ

ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶವು ಈ ಹಿಂದೆ ಎರಡು ಬಾರಿ (1977 ಡಿಸೆಂಬರ್‌ನಲ್ಲಿ ಹೈದರಾಬಾದ್ ಮತ್ತು 1978 ಮೇ ನಲ್ಲಿ ನವದೆಹಲಿಯಲ್ಲಿ) ನಡೆದಿದ್ದು, ಇದೀಗ ಮೂರನೆಯ ಬಾರಿಯ ರಾಷ್ಟ್ರೀಯ ಸಮಾವೇಶವು ಬೆಂಗಳೂರಿನಲ್ಲಿ ಸೇರಿದೆ. ಜುಲೈ 19 ಮತ್ತು 20 ರಂದು ಬೆಂಗಳೂರು ನಗರದ ಟೌನ್‌ಹಾಲಿನಲ್ಲಿ ಜರಗಲಿರುವ ಸಮಾವೇಶವು 19 ರಂದು ಬೆಳಗ್ಗೆ ಪ್ರಾರಂಭವಾಗಿದೆ.

ಈ ಹಿಂದಿನ ಸಮಾವೇಶಗಳ ಸಂದರ್ಭದಲ್ಲಿ ಎಲ್ಲ ಕಾರ್ಮಿಕ ವರ್ಗವನ್ನು ಎದುರಿಸುತ್ತಲಿದ್ದ, ಮತ್ತು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಗೆ ಸೀಮಿತವಾಗಿದ್ದ ಸಮಸ್ಯೆಗಳು ಹಾಗೆಯೇ ಇವೆ ಮಾತ್ರವಲ್ಲ ಕೆಲವು ಇನ್ನೂ ಬಿಗಡಾಯಿಸಿವೆ. 1978 ಮೇ ತಿಂಗಳಲ್ಲಿ ನವದೆಹಲಿಯಲ್ಲಿ ಸೇರಿದ್ದ ಸಮಾವೇಶವು 1978 ಜೂನ್ 28 ರಂದು ರಾಷ್ಟ್ರದಾದ್ಯಂತ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ ಒಂದು ದಿನದ ಸಾಂಕೇತಿಕ ಮುಷ್ಕರವನ್ನು ನಡೆಸಲು ಕರೆ ಇತ್ತಿತು. ಆದರೆ, ವೇತನ, ತುಟ್ಟಿಬತ್ತೆ ಮೊದಲಾದುವುಗಳಲ್ಲಿ ಕಾರ್ಮಿಕರಿಗಿರುವ ಸಾಮೂಹಿಕವಾಗಿ ನ್ಯಾಯಪಡೆಯುವ ಹಕ್ಕ (collective bargaining power) ನ್ನು ಒಪ್ಪಿಕೊಳ್ಳುವುದಾಗಿಯೂ, ವೇತನ ಮತ್ತು ತುಟ್ಟಿಬತ್ತೆ ಬಗ್ಗೆ ಮಾರ್ಗದರ್ಶನವನ್ನು ರೂಪಿಸುವುದರಲ್ಲಿ ಕಾರ್ಮಿಕ ಸಂಘಟನೆಗಳನ್ನು ಸೇರಿಸಿಕೊಳ್ಳಲಾಗುವುದೆಂದೂ ಕೇಂದ್ರ ಸರಕಾರವು ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಭರವಸೆ ಕೊಟ್ಟದ್ದರಿಂದ ಜೂನ್ 28ರ ನಿಯೋಜಿತ ಸಾಂಕೇತಿಕ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಆದರೆ ಈ ಬಗ್ಗೆ, ಅಂದರೆ ಭರವಸೆಯನ್ನು ಕಾರ್ಯಗತಗೊಳಿಸುವತ್ತ, ಸರಕಾರ ಏನೊಂದೂ ಕ್ರಮವಹಿಸಿಲ್ಲ. ಮತ್ತೆ ಕಾರ್ಮಿಕ ಸಂಘಟನೆಗಳು ಹೋರಾಟ ಮಾಡಬೇಕಾಗುವುದೆಂದು ಎಚ್ಚರಿಸಿದಾದ, 1978 ಸೆಪ್ಟೆಂಬರ್ ಒಂದರಂದು ಮಾತುಕತೆ ನಡೆಯಿತು. ಆದರೆ ಏನೂ ಫಲಕಾರಿಯಾಗಲಿಲ್ಲ. ಸಮಸ್ಯೆಗಳು ಹಾಗೆಯೇ ಉಳಿದು, ಬಿಗಡಾಯಿಸುತ್ತಲಿದೆ.

[ಕಡೆಯ ಪುಟ ನೋಡಿ]

ಅವಿಶ್ವಾಸ ನಿರ್ಣಯದ ಮೇಲೆ ಸಿ. ಪಿ. ಐ. (ಎಂ) ತೆಗೆದುಕೊಂಡ ನಿಲುಮೆ

ಲೋಕಸಭೆಯಲ್ಲಿ ಮೊರಾರ್ಜಿ ದೇಸಾಯಿಯವರ ಸರಕಾರದ ವಿರುದ್ಧ ವಿರೋಧ ಪಕ್ಷವಾದ ಸ್ವರಣಸಿಂಗರ ಕಾಂಗ್ರೆಸ್ ಪಕ್ಷವು ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಮೇಲೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಯಾವ ನಿಲುಮೆಯನ್ನು ತೆಗೆದುಕೊಳ್ಳುವುದು ಎಂಬುದರ ಬಗ್ಗೆ ಬಹಳಷ್ಟು ಊಹಾಪೋಹಗಳು ಎದ್ದಿದ್ದುವು; ಇದರ ಬಗ್ಗೆ ಸಾಕಷ್ಟು ಕುತೂಹಲವೂ ಕೆರಳಿದ್ದಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಬಲವನ್ನು ಪಡೆಯುವುದಕ್ಕಾಗಿ ಜನತಾಪಕ್ಷವು ಪ್ರಯತ್ನಿಸುತ್ತಲಿದೆ ಎಂಬ ಸುದ್ದಿಯೂ ಬಂದಿತ್ತು.

ಜುಲೈ 13ರಂದು ನವದೆಹಲಿಯಲ್ಲಿ ಸೇರಿದ್ದ ಪೊಲಿಟ್ ಬ್ಯೂರೋವು ಅವಿಶ್ವಾಸ ನಿರ್ಣಯದ ಮೇಲಿನ ನಿಲುವಿನ ಬಗ್ಗೆ ಚರ್ಚಿಸಿ ಲೋಕಸಭೆಯಲ್ಲಿರುವ ತನ್ನ ಪಕ್ಷದ 22 ಮಂದಿ ಸದಸ್ಯರು ಅವಿಶ್ವಾಸ ನಿರ್ಣಯದ ಪರವಾಗಿ ಮತ ಚಲಾಯಿಸಲು ಆದೇಶ ನೀಡಿತ್ತು.

ಮೊರಾರ್ಜಿ ದೇಸಾಯಿಯವರ ನೇತೃತ್ವದ ಜನತಾಪಕ್ಷದ ಸರಕಾರವು ಸರ್ವಾಧಿಕಾರಿ ಶಕ್ತಿಗಳಿಗೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಟ್ಟಿದೆಯೆಂದೂ, ಈ ಸರಕಾರದಲ್ಲಿ ಹಿಂದೂ ರಾಷ್ಟ್ರೀಯವಾದಿಗಳ ಹಿಡಿತವೇ ಮೇಲಾಗಿದೆಯೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೊ ಹೇಳಿದೆ. ಜನತಾ ಸರಕಾರವು ವಿಶ್ವಾಸವನ್ನು ಕೇಳುವುದೆಂದರೆ "ಅದು ಸರಕಾರವು ಕಾರ್ಮಿಕರಿಗೆ ಬೋನಸ್ಸನ್ನು ಕೊಡಲು ನಿರಾಕರಿಸಿದ ನಿಲುಮೆ, ಸ್ಥಾನಬದ್ಧತಾ ಕಾಯ್ದೆಯನ್ನು ಮತ್ತೆ ಜಾರಿಗೆ ತರುವ ನಿಲುಮೆ, ಪೋಲೀಸರ ಹೋರಾಟವನ್ನು ಹತ್ತಿಕ್ಕುವ ನಿಲುಮೆ. ರಿಸರ್ವ್ ಬ್ಯಾಂಕ್ ನೌಕರರ ಹೋರಾಟವನ್ನು ನಿರ್ಬಂಧಿಸುವ ಸುಗ್ರೀವಾಜ್ಞೆ ಮತ್ತು ತುಟ್ಟಿಬತ್ತೆ ಕಡ್ಡಾಯ ಠೇವಣಿ ಮರುಪಾವತಿಯನ್ನು ತಡೆಹಿಡಿಯುವ ಸುಗ್ರೀವಾಜ್ಞೆ ಮೊದಲಾದ ನಿಲುಮೆಗಳ ಬಗ್ಗೆ ವಿಶ್ವಾಸ ಮತ್ತು ಬೆಂಬಲವನ್ನು ಕೋರುವುದಾಗಿದೆ"

"ಜನತೆಯ ಮತ್ತು ಶ್ರಮಜೀವಿಗಳ ಹಿತಗಳನ್ನು ರಕ್ಷಿಸುವುದಕ್ಕಾಗಿ ಹೋರಾಡುತ್ತ ಬಂದಿರುವ ಹಾಗೂ ಸರ್ವಾಧಿಕಾರದ ವಿರುದ್ಧ ಹೋರಾಡುವ ನಮ್ಮ ಪಕ್ಷವು ಸರಕಾರದ ಈ ಧೋರಣೆಗಳ ಬಗ್ಗೆ ವಿಶ್ವಾಸ ಸೂಚಿಸಲು ಅಥವಾ ಸರಕಾರವನ್ನು ಬೆಂಬಲಿಸುವುದು ಸಾಧ್ಯವಿಲ್ಲ"

1977ರ ಚುನಾವಣೆಯಲ್ಲಿ ತನ್ನ ಪಕ್ಷದ ಬೆಂಬಲವನ್ನು ಪಡೆದು ಅಧಿಕಾರಕ್ಕೆ ಬಂದ ಮೊರಾರ್ಜಿ ದೇಸಾಯಿ ಅವರ ಸರಕಾರಕ್ಕೆ ತಾನು ಜನತೆಗೆ ಕೊಟ್ಟ ಭರವಸೆಗಳನ್ನು ಈಡೇರಿಸಿಕೊಳ್ಳುವತ್ತ ತನ್ನ ಕಾರ್ಯಕ್ರಮವನ್ನು ಸುಧಾರಿಸುವುದಕ್ಕೆ ಮನಸ್ಸಿಲ್ಲ. ಸರ್ವಾಧಿಕಾರ ಶಕ್ತಿಗಳಿಗೆ ಅನುಕೂಲ ವಾತಾವರಣವನ್ನು ಉಂಟುಮಾಡಿರುವ ಈ ಸಂದರ್ಭದಲ್ಲಿ ಜನತಾಪಕ್ಷದಲ್ಲಿರುವ, ಚುನಾವಣಾ ಘೋಷಣೆಗಳಿಗೆ ಇನ್ನೂ ಬದ್ಧವಾಗಿರುವ ಜಾತ್ಯಾತೀತ ಶಕ್ತಿಗಳಿಗೆ ಸರ್ವಾಧಿಕಾರದ ವಿರುದ್ಧ ಹೋರಾಡುವುದರಲ್ಲಿ ದೊಡ್ಡ ಪಾತ್ರವಿದೆ ಎಂದೂ ಪೊಲಿಟ್ ಬ್ಯೂರೊ ಅಭಿಪ್ರಾಯಪಡುತ್ತದೆ.

ಬೆಳೆದುಬಂದಿರುವ ಈ ಬಿಕ್ಕಟ್ಟಿನ ಹಿಂದೆ ಜನಸಂಘ ಆರ್.ಎಸ್.ಎಸ್.ಗಳು ಜನತಾಪಕ್ಷ ಮತ್ತು ಸರಕಾರದ ಮೇಲೆ ತಮ್ಮ ಹಿಡಿತವನ್ನು ಹೆಚ್ಚಿಸಲು ನಡೆಸಿದ ಸತತ ಪ್ರಯತ್ನವಿದೆ. ಹಲವು ರಾಜ್ಯಗಳಲ್ಲಿ ಜನಸಂಘ-ಆರ್.ಎಸ್.ಎಸ್. ಗಳು ತಮ್ಮ ಸ್ಥಾನವನ್ನು ಭದ್ರಗೊಳಿಸುವುದು, ಬಿಹಾರ ಮತ್ತು ಹರ್ಯಾಣಗಳಲ್ಲಿ ಸರಕಾರವನ್ನು ಉರುಳಿಸಿರುವುದು ಮತ್ತು ಜನಸಂಘ-ಆರ್.ಎಸ್.ಎಸ್. ಕೂಟವು ಸಂಘಟನೆಯಲ್ಲಿ ತನ್ನ ಹಿಡಿತವನ್ನು ಭದ್ರಗೊಳಿಸುವುದರ ಪರಿಣಾಮವಾಗಿ ಹಿಂದೂ ರಾಷ್ಟ್ರೀಯವಾದ ಮತ್ತು ಸಂಕುಚಿತ ವಾದಗಳ ಪ್ರಭಾವವು ಜನತಾಪಕ್ಷ ಮತ್ತು ಸರಕಾರದ ಮೇಲೆ ಹೆಚ್ಚುತ್ತಾ ಬಂದಿವೆ.

ಜನತಾ ಪಕ್ಷವು ಸರ್ವಾಧಿಕಾರತ್ವದ ವಿರುದ್ಧ ಹೋರಾಡಲಿರುವ ಒಂದು ಕೂಟವಾಗಿರಬೇಕೆಂಬ ಅಂಶವನ್ನು ಮರೆತು, ಇದಕ್ಕೆ ಬದಲಾಗಿ ಜನಸಂಘ, ಆರ್. ಎಸ್. ಎಸ್. ಗಳಿಗೆ ರಕ್ಷಣೆ ಕೊಡಲಿರುವಂತಹ ಒಂದು ಸಂಸ್ಥೆಯಾಗಿ ಪರಿವರ್ತನೆಯಾಗಿದೆ. ಮಾತ್ರವಲ್ಲ, ಚುನಾವಣೆಯಲ್ಲಿ ಜನತೆಗಿತ್ತ ಭರವಸೆಗಳನ್ನು ಪೂರೈಸುವುದರತ್ತ ಯೋಚಿಸಲೂ ಮೊರಾರ್ಜಿ ಸರಕಾರಕ್ಕೆ ಸಮಯವಿಲ್ಲ. ಸರ್ವಾಧಿಕಾರ ಶಕ್ತಿಗಳಿಗೆ ಅನುಕೂಲವಾಗುವಂತಹ ವಾತಾವರಣ ಉಂಟುಮಾಡುವ ಜನತಾ ಸರಕಾರದ ಧೋರಣೆಗಳ ಪರಿಣಾಮದ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಎಚ್ಚರಿಕೆ ಕೊಡುತ್ತಾ ಬಂದಿದೆ. ಆದರೆ ತಮಗಿರುವ ಬಹುಮತದ ಮೇಲಿನ ಅತಿ ವಿಶ್ವಾಸದಿಂದ, ಸರಕಾರವು ಈ ಎಲ್ಲಾ ಸಲಹೆ ಎಚ್ಚರಿಕೆಗಳನ್ನು ಕಡೆಗಣಿಸಿತು ಮಾತ್ರವಲ್ಲ ಜನತೆಗೆ ಕೊಟ್ಟ ಚುನಾವಣಾ ಭರವಸೆಗಳನ್ನು ಮಾನ್ಯಮಾಡಲು ನಿರಾಕರಿಸಿತು. ಲೋಕಸಭೆಯಲ್ಲಿ ಅವಿಶ್ವಾಸ

[ಕಡೆಯ ಪುಟ ನೋಡಿ]

ಮಾತೃಭಾಷೆಗೇ ಪ್ರಾಧಾನ್ಯತೆ ಅವಶ್ಯ

ಇತ್ತೀಚೆಗೆ ಎಲ್ಲ ಪತ್ರಿಕೆಗಳ 'ವಾಚಕರ ವಾಣಿ'ಯ ಕಲಮುಗಳಲ್ಲಿ ಪ್ರಮುಖ ಸುದ್ದಿಯಾಗಿರುವ ಮತ್ತು ರಾಜ್ಯದ ವಿದ್ಯಾರ್ಥಿಗಳ ಹಾಗೂ ಶಿಕ್ಷಣತಜ್ಞರ ನಡುವೆ ವಾದ-ವಿವಾದಗಳಿಗೆ ಒಳಗಾಗಿರುವ 'ಸಂಸ್ಕೃತ ಭಾಷೆಯ ಸ್ಥಾನ'ದ ಬಗ್ಗೆ ಫೆಡರೇಷನ್ ಈ ಕೆಳಕಂಡ ನಿಲುವನ್ನು ವ್ಯಕ್ತಪಡಿಸಿದೆ.

ಭಾಷಾವಾರು ಪ್ರಾಂತಗಳಾಗಿ ವಿಂಗಡನೆಯಾಗಿರುವ ನಮ್ಮ ರಾಜ್ಯಗಳಲ್ಲಿ ಬಹುಸಂಖ್ಯಾತರ ಮಾತೃಭಾಷೆಗಳು ರಾಜ್ಯ ಭಾಷೆಗಳಾಗಿದ್ದು ಸಂಸ್ಕೃತ ಭಾಷೆಯು ಯಾವುದೇ ರಾಜ್ಯದ ರಾಜ್ಯಭಾಷೆಯಾಗಲಿ ಅಥವಾ ಭಾರತದ ಯಾವುದೇ ಪ್ರದೇಶದ ಮಾತೃಭಾಷೆಯಾಗಿರುವುದಿಲ್ಲ. ಈ ಕಾರಣದಿಂದ ಸಂಸ್ಕೃತವು ಜನಸಾಮಾನ್ಯರ ವ್ಯವಹಾರಗಳಿಂದ ದೂರವಾಗಿದ್ದು ಸಂಕುಚಿತ ಚೌಕಟ್ಟಿನಲ್ಲಿರುವ ಭಾಷೆಯಾಗಿದೆ. ಜನಸಾಮಾನ್ಯರ ಹಿತದೃಷ್ಟಿಯಿಂದ ರಾಜ್ಯದ ಆಡಳಿತ ಮತ್ತು ಶಿಕ್ಷಣ ರಂಗಗಳಲ್ಲಿ ಮಾತೃಭಾಷೆಗೆ ಪ್ರಾತಿನಿಧ್ಯವಿರಬೇಕು. ಆದರೆ ಈಗ ನೆಪ ಮಾತ್ರಕ್ಕೆ ಆಡಳಿತ ಭಾಷೆ 'ಕನ್ನಡ' ಎಂದಿದ್ದರೂ ವಾಸ್ತವವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಬಿಟ್ಟು ಹೋದ ಇಂಗ್ಲೀಷ್ ಭಾಷೆಯೇ ಪ್ರಾಧಾನ್ಯತೆ ಪಡೆದಿದೆ. ಶಿಕ್ಷಣರಂಗದಲ್ಲಿ ಇದರದ್ದೇ ಪ್ರಭಾವವಿದೆ. ಇದರಿಂದ ಜನಸಾಮಾನ್ಯರು ಆಡಳಿತ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸಲಾಗುತ್ತಿಲ್ಲವಲ್ಲದೆ ವಿದ್ಯಾರ್ಥಿಗಳು 'ವಿಷಯಗ್ರಹಣ' ಮಾಡಿ ತಮ್ಮ ಬುದ್ಧಿ ಮಟ್ಟವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ವಿಫಲರಾಗಿ ಪಠ್ಯಪುಸ್ತಕಗಳ ಸಾಲುಗಳನ್ನೇ ಬಾಯಿಪಾಠ ಮಾಡಿಕೊಂಡು ಪರೀಕ್ಷೆಗಳಲ್ಲಿ ಯಥಾವತ್ತಾಗಿ ಭಟ್ಟಿ ಇಳಿಸುತ್ತಾರೆ. ಈ ರೀತಿಯ ಶಿಕ್ಷಣದಿಂದ ಏನು ಪ್ರಯೋಜನ? ಆದ್ದರಿಂದಲೇ ಫೆಡರೇಷನ್ ತನ್ನ 'ಕಾರ್ಯಕ್ರಮ'ದಲ್ಲಿ ಎಲ್ಲ ಹಂತಗಳಲ್ಲೂ ಮಾತೃಭಾಷೆಗಳನ್ನು ಶಿಕ್ಷಣ ಮಾಧ್ಯಮವನ್ನಾಗಿ ಜಾರಿಗೆ ತರಬೇಕೆಂದು ಒತ್ತಾಯಿಸುತ್ತಿರುವುದು. ಅಲ್ಲದೆ ವಿದ್ಯಾರ್ಥಿಗಳಿಗೆ ಹೊರೆಯಾಗಿರುವ 'ತ್ರಿಭಾಷಾ ಸೂತ್ರ'ವನ್ನು ಕಿತ್ತೊಗೆಯಬೇಕೆಂದು ಒತ್ತಾಯ ತರುತ್ತಿರುವುದು. ಇಂತಹ ಪರಿಸ್ಥಿತಿಯಲ್ಲಿ ಶಾಲಾ-ಕಾಲೇಜುಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ಕನ್ನಡದ ಬದಲು ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯಾಗಿ ಆಯ್ಕೆಮಾಡಿಕೊಳ್ಳುತ್ತಲಿದ್ದು ಸಂಸ್ಕೃತ ಭಾಷೆಯ ಪಠ್ಯಕ್ರಮ ಸುಲಭ ಮತ್ತು ಕಡಿಮೆ ಪ್ರಮಾಣದ್ದಾಗಿರುವುದಲ್ಲದೆ ಬೇರೆ ಯಾವ ಪ್ರಮುಖ ಕಾರಣವೂ ಇಲ್ಲ. ಇದರಿಂದ ರಾಜ್ಯದ ಜನಸಾಮಾನ್ಯರಿಗೆ ಪರಿಚಯವಿರುವ ಕನ್ನಡ ಭಾಷೆಯ, ಸಾಹಿತ್ಯದ ಬೆಳವಣಿಗೆಗೆ ಅಥವಾ ಭಾಷೆಯ ಸರಿಯಾದ ಪ್ರಯೋಗಕ್ಕಾಗಿಯಾದರೂ ತಮ್ಮ ಮಾತೃಭಾಷೆಯ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕಾಗಿರುವುದು ಅವಶ್ಯಕವಾಗಿದೆ. ಆದ್ದರಿಂದ ಹೈಸ್ಕೂಲುಗಳಲ್ಲಿ ಮಾತ್ರವಲ್ಲದೆ ಕಾಲೇಜುಗಳಲ್ಲಿಯೂ ಸಂಸ್ಕೃತವನ್ನು ಐಚ್ಛಿಕ (ಖಿಡ್ಡಾಯವಲ್ಲದ್ದು) ವಿಷಯವನ್ನಾಗಿ ಮಾಡುವಂತೆ ಫೆಡರೇಷನ್ ಒತ್ತಾಯಿಸುತ್ತದೆ. ಹಾಗೂ ರಾಜ್ಯ ಸರ್ಕಾರದ ಕ್ರಮಕ್ಕೆ ಬೆಂಬಲವೀಯುತ್ತದೆ.

ಈ ವಾದ-ವಿವಾದಗಳಲ್ಲಿ ಮುಖ್ಯವಾಗಿ ಕೋಮುವಾದ ಮತ್ತು 'ಪವಿತ್ರ ಸಂಸ್ಕೃತಿ'ಯ ಪ್ರತಿಪಾದಕರುಗಳು ವಿದ್ಯಾಮಂತ್ರಿಗಳ ಈ ಕ್ರಮದಿಂದ (ಸಂಸ್ಕೃತವನ್ನು ಐಚ್ಛಿಕ ವಿಷಯವಾಗಿ ಮಾಡುವ) ಹಿಂದೂ ಸಂಸ್ಕೃತಿಯ ಪ್ರಮುಖ ತತ್ವಗಳಲ್ಲೊಂದಾದ 'ದೇಶ ಭಾಷೆ'ಯಾದ ಸಂಸ್ಕೃತ ಭಾಷೆಯನ್ನು ಕಲಿಯುವ ಪವಿತ್ರ ಹಕ್ಕನ್ನು ಮೊಟಕುಗೊಳಿಸಲಾಗಿದೆಯೆಂದೂ ಹೇಳುತ್ತಿದ್ದಾರೆ. ಸಂಸ್ಕೃತದ ಅಧ್ಯಾಪಕರುಗಳ ಉದ್ಯೋಗದ ಭದ್ರತೆಯ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಎಲ್ಲ ಭಾಷೆಗಳಿಗೂ ಮಾತೆಯಾದ ಸಂಸ್ಕೃತ ಭಾಷೆಗೆ ತೆಲುಗು, ತಮಿಳು, ಮುಖ್ಯವಾಗಿ ಅನ್ಯ ಭಾಷೆಯಾದ ಉರ್ದು ಭಾಷೆಗೆ. ಸಿಕ್ಕಿರುವ ಮಾನ್ಯತೆ ಸಿಗುತ್ತಿಲ್ಲವೆಂದು ವಿಷಾದಿಸುತ್ತಿದ್ದಾರೆ.

ಇವುಗಳಿಗೆ ಉತ್ತರವೆಂದರೆ ಪವಿತ್ರ ಸಂಸ್ಕೃತಿಯ ತತ್ವಗಳನ್ನು ಅನುಸರಿಸುವುದು ಈ ಆದರ್ಶಗಳು ಬೆಂಬಲಿಗರಿಗೆ ಮಾತ್ರ, ಮುಖ್ಯವಾಗಿದ್ದು ಪ್ರಜಾಪ್ರಭುತ್ವವಾದಿಗಳಿಗೆ ದೇಶದ ಪ್ರತಿಯೊಬ್ಬ ಪ್ರಜೆಗೂ ಯಾವುದೇ ಪ್ರದೇಶದಲ್ಲಿ ತನ್ನ ಮಾತೃಭಾಷೆಯನ್ನು ಅಭ್ಯಾಸಮಾಡುವ ಹಕ್ಕನ್ನು ರಕ್ಷಿಸುವುದು ಮುಖ್ಯವಾಗುತ್ತದೆ. ಸಂಸ್ಕೃತ ಭಾಷೆಗೆ ಮತ್ತು ದೇಶದ ಕೆಲವು ಭಾಷೆಗಳಿಗೆ ಸಂಬಂಧವಿದೆಯೆಂಬ ಮಾತ್ರಕ್ಕೆ ಆ ಭಾಷೆಗಳು ತಮ್ಮ ಅಸ್ತಿತ್ವವನ್ನು ಮರೆತು ಸಂಸ್ಕೃತಕ್ಕೆ ಉಚ್ಚ ಸ್ಥಾನವನ್ನು ನೀಡಿ ಅವುಗಳನ್ನು ಅವಲಂಬಿಸಿರುವ ಕೋಟ್ಯಾಂತರ ಜನಸಾಮಾನ್ಯರ ಹಿತಾಸಕ್ತಿಗಳನ್ನು ತಳ್ಳಿಹಾಕುವುದು ಪವಿತ್ರ ಸಂಸ್ಕೃತಿಯವರಿಗೆ ಸರಿಯೆನಿಸಿದರೂ ಮಿಕ್ಕವರಿಗೆ ಇದು ಅಪಾಯಕಾರಿಯಾದ ಅಭಿಪ್ರಾಯವಾಗುತ್ತದೆ. ಇಷ್ಟಾದರೂ ಸಂಸ್ಕೃತವನ್ನು ಐಚ್ಛಿಕ ವಿಷಯವನ್ನಾಗಿ ಕಲಿಯಲು ಅವಲಂಬಿಸಿರುವುದರಿಂದ ವಿದ್ಯಾಮಂತ್ರಿಗಳ ಈ ಕ್ರಮದಿಂದ ಅವರ ಪವಿತ್ರ ಹಕ್ಕುಗಳಾಗಲಿ, ಮುಖ್ಯವಾಗಿ ದೇಶದ ಯಾವೊಬ್ಬ ಪ್ರಜೆಗೂ ತನಗೆ ಇಷ್ಟ ಬಂದ ಭಾಷೆಯನ್ನು ಕಲಿಯುವ ಪ್ರಜಾಸತ್ತಾತ್ಮಕ ಹಕ್ಕಿಗಾಗಲಿ ಧಕ್ಕೆ ಬರುವುದಿಲ್ಲ. ಇದರಿಂದಾಗಿ ಸಂಸ್ಕೃತವನ್ನು ವಿರೋಧಿಸಿದಂತಾಗಲಿ ತಿರಸ್ಕರಿಸಿದಂತಾಗಲೀ ಆಗುವುದಿಲ್ಲವಲ್ಲ. ಇಂದು ಒಂದು ತರಗತಿಯಲ್ಲಿ ಕನ್ನಡವನ್ನು ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವಾಗ ಸರ್ಕಾರವು ನಾಳೆ ಸಂಸ್ಕೃತಕ್ಕೂ ಈ ಅವಕಾಶವನ್ನು ಕೊಡದಿರಲಾರದು. ಸಂಸ್ಕೃತವು ಐಚ್ಛಿಕ ವಿಷಯವಾದ ಮಾತ್ರಕ್ಕೆ ಸಂಸ್ಕೃತದ ಅಧ್ಯಾಪಕರುಗಳೇನೂ ಉದ್ಯೋಗ ಕಳೆದುಕೊಳ್ಳುವುದಿಲ್ಲವಲ್ಲ. ಇನ್ನು 'ಉರ್ದು' ಭಾಷೆಗೆ ಪ್ರಥಮ ಭಾಷೆಯ ಸ್ಥಾನ ನೀಡುವುದನ್ನು ಫೆಡರೇಷನ್ ಸಮರ್ಥಿಸುತ್ತದೆ. ಕಾರಣ, 'ಉರ್ದು' ನಮ್ಮ ದೇಶದ ಒಂದು ಜನಾಂಗದ ಮುಖ್ಯವಾಗಿ ಅಲ್ಪಸಂಖ್ಯಾತರ ಭಾಷೆಯಾಗಿದ್ದು ಗಣನೀಯ ಪ್ರಮಾಣದಲ್ಲಿ ವ್ಯವಹಾರಿಕವಾಗಿ ಉಪಯೋಗಿಸಲಾಗುತ್ತಿದೆಯಾದ್ದರಿಂದ ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆಯ ದೃಷ್ಟಿಯಿಂದ ಇದು ಖಂಡಿತ ಸರಿ.

ಅನೇಕ ವರ್ಷಗಳಿಂದ ಭಾರತದ ಪ್ರಜೆಗಳಾಗಿರುವ ಗಣನೀಯ ಸಂಖ್ಯೆಯಲ್ಲಿರುವ ಎರಡು ಜನಾಂಗಗಳ ಭಾಷೆಗಳಾದ 'ಉರ್ದು' ಮತ್ತು 'ನೇಪಾಳಿ' ಭಾಷೆಗಳನ್ನು ಕೇಂದ್ರ ಸರ್ಕಾರವು ಅಧಿಕೃತವಾಗಿ ರಾಷ್ಟ್ರಭಾಷೆಗಳನ್ನಾಗಿ (14 ರಾಷ್ಟ್ರಭಾಷೆಗಳ ಜೊತೆಗೆ) ಅಂಗೀಕರಿಸಬೇಕೆಂದು ಫೆಡರೇಷನ್ ಒತ್ತಾಯಿಸುತ್ತಾ ಬಂದಿದ್ದು 'ಮಾನವತಾ ವಾದ'ದ ಉನ್ನತ ಮೌಲ್ಯವನ್ನು ಎತ್ತಿಹಿಡಿದಿದೆ.

ಈ ಮೇಲಿನ ಕಾರಣಗಳಿಂದಾಗಿ ಫೆಡರೇಷನ್ ವಿದ್ಯಾಮಂತ್ರಿಗಳ ಕ್ರಮಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದ್ದು ಇವನ್ನು ಜಾರಿಗೆ ತರುವಲ್ಲಿ ಪ್ರಗತಿ ವಿರೋಧಿಗಳು ಅಡಚಣೆಯುಂಟು ಮಾಡಲು ಪ್ರಯತ್ನಿಸಿದಲ್ಲಿ ಈ ಬಗ್ಗೆ ರಾಜ್ಯದಾದ್ಯಂತ ವಿದ್ಯಾರ್ಥಿಗಳನ್ನು ಸಂಘಟಿಸಿ ಕುಯುಕ್ತಿಗಳನ್ನು ಸೋಲಿಸಲು ಚಳುವಳಿ ನಡೆಸಲು ತೀರ್ಮಾನಿಸಿದ್ದು ಈ ಕಾರ್ಯಕ್ರಮಕ್ಕೆ ಎಲ್ಲಾ ಪ್ರಜಾಪ್ರಭುತ್ವವಾದಿಗಳ ಬೆಂಬಲ ಕೋರಲಾಗಿದೆ.

—ಶಾಂತರೇಣುಕಾರಾಧ್ಯ

ಹೋಟೆಲು ಕಾರ್ಮಿಕ ಸಂಘಟನೆಗಳ ರಾಜ್ಯ ಮಟ್ಟದ ಸಮಾವೇಶ

ಬೆಂಗಳೂರು ಜಿಲ್ಲಾ ಹೋಟೆಲು ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ. ಟಿ. ಎಸ್. ಅನಂತರಾಮ್ ಮತ್ತು ಕರ್ನಾಟಕ ಹೋಟೆಲ್ ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ. ಬಿ. ಶ್ರೀಪತಿ ರಾವ್ ಇವರುಗಳು ಈ ಕೆಳಗಿನ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುವರು;

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘ ಹಾಗೂ ಕರ್ನಾಟಕ ಹೋಟೆಲ್ ಕಾರ್ಮಿಕರ ಸಂಘದ ಪದಾಧಿಕಾರಿಗಳ ಜಂಟಿ ಸಭೆಯು ದಿನಾಂಕ 15-7-79 ರಂದು ಸೇರಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಂಡಿದೆ.

1. ಹೋಟೆಲ್ ಕಾರ್ಮಿಕರ ಬೃಹದಾಕಾರ ಸಮಸ್ಯೆಗಳನ್ನು ನಿವಾರಣೆ ಮಾಡಲು "ಬೆಂಗಳೂರು ಹೋಟೆಲ್ ಕಾರ್ಮಿಕರ ಕ್ರಿಯಾಸಮಿತಿ"ಯನ್ನು ರಚಿಸಿ ಜಂಟಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತೀರ್ಮಾನಮಾಡಲಾಯಿತು. ನಮ್ಮ ಕಾರ್ಯಕ್ರಮಕ್ಕೆ ಒಪ್ಪಿಕೊಳ್ಳುವ ಯಾವುದೇ ಹೋಟೆಲ್ ಕಾರ್ಮಿಕರ ಇತರೆ ಸಂಘಗಳನ್ನು ಈ ಕ್ರಿಯಾಸಮಿತಿಗೆ ಆಹ್ವಾನಿಸಬೇಕೆಂದು ತೀರ್ಮಾನ ಮಾಡಲಾಯಿತು.

2. ಹೋಟೆಲ್ ಕಾರ್ಮಿಕರ ಕನಿಷ್ಟ ವೇತನ, ಹಬ್ಬದ ರಜಾದಿನ ಮುಂತಾದುವುಗಳ ಬಗ್ಗೆ ತುರ್ತಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತೀರ್ಮಾನ ಮಾಡಲಾಯ್ತು.

ಇತ್ತೀಚೆಗೆ ಕರ್ನಾಟಕ ಸರ್ಕಾರ ಹೊರಡಿಸಿದ್ದ ಕನಿಷ್ಟ ವೇತನದ ಕರಡು ಪ್ರಕಟನೆಗೆ ಕೇಳಿದ್ದ ತಕರಾರು ಹಾಗೂ ಸಲಹೆಯ ದಿನಾಂಕವನ್ನು ಮುಂದೂಡಿಸಬೇಕೆಂದೂ ಇದು ಎಲ್ಲಾ ಕಾರ್ಮಿಕರ ಗಮನಕ್ಕೂ ಬಂದಿಲ್ಲವಾದ್ದರಿಂದ ಸೂಕ್ತ ಅವಕಾಶ ಕೊಡುವಂತೆ ಸರ್ಕಾರವನ್ನು ಒತ್ತಾಯಿಸಬೇಕೆಂದು ತೀರ್ಮಾನಿಸಲಾಯ್ತು.

3. ಹೋಟೆಲ್ ಕಾರ್ಮಿಕರ ಸಮಸ್ಯೆಯನ್ನು ಧೀರ್ಘವಾಗಿ ಚರ್ಚಿಸಿ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಲು ಇದೇ ಅಗಸ್ಟ್ ತಿಂಗಳಿನಲ್ಲಿ ಕರ್ನಾಟಕ ಮಟ್ಟದ ಹೋಟೆಲ್ ಕಾರ್ಮಿಕರ ಸಂಘದ ಮುಖಂಡರ ಸಮಾವೇಶವನ್ನು ಕರೆಯಬೇಕೆಂದು ತೀರ್ಮಾನಮಾಡಲಾಯ್ತು. ●

ಎಸ್ಟೇಟ್ ಕಾರ್ಮಿಕರನ್ನು ಬೆಂಬಲಿಸಿ ಸಭೆ

ಬೆಂಗಳೂರು ದಕ್ಷಿಣ ತಾಲ್ಲೂಕು ಎಸ್ಟೇಟ್ ಮತ್ತು ಫಾರಂ ಕೆಲಸಗಾರರ ಸಂಘದ ಆಶ್ರಯದಲ್ಲಿ ತಾತಗುಣಿ ಎಸ್ಟೇಟಿನ ಹರಿಜನ ಕಾರ್ಮಿಕರ ಬೆಂಬಲಕ್ಕಾಗಿ ಒಂದು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ದಿನಾಂಕ 15-7-79 ರಂದು ನಡೆದ ಈ ಸಭೆಯ ಅಧ್ಯಕ್ಷತೆಯನ್ನು ಕಾಂ.ಲಕ್ಕಣ್ಣ ಅವರು ವಹಿಸಿದ್ದರು. ಕರ್ನಾಟಕ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್, ಕಾಂ. ಎಚ್ ಮುಗುವಾಳಪ್ಪ, ಜನತಾಪಕ್ಷದ ತಲಘಟ್ಟಪುರ ಗ್ರೂಪ್ ವಿ. ಪಿ. ಛೇರ್ ಮನ್ ಶ್ರೀ ಎಚ್. ಮುನಿರಾಮಯ್ಯ ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ○

ಎಸ್. ಎಫ್. ಐ. ರಾಜ್ಯಸಮಿತಿ ಸದಸ್ಯರ ಅವಗಾಹನೆಗೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಕರ್ನಾಟಕ ರಾಜ್ಯಸಮಿತಿಯ ವಿಸ್ತೃತ ಸಭೆಯು 5-8-79 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ ತನಕ ಮತ್ತು 6-8-79 ರಂದು ಬೆಳಿಗ್ಗೆ ಬೆಂಗಳೂರಿನಲ್ಲಿ ಸೇರಲಿರುವುದು. ರಾಜ್ಯಸಮಿತಿಯ ಎಲ್ಲಾ ಸದಸ್ಯರುಗಳೂ, ಆಮಂತ್ರಿತರೂ ತಪ್ಪದೆ ಈ ಸಭೆಯಲ್ಲಿ ಭಾಗವಹಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಮು. ಇ. ಇಕ್‌ಬಾಲ್ ಹುಸ್ಸೇನ್
ಅಧ್ಯಕ್ಷ
ರಾಜ್ಯಸಮಿತಿ.

ಸಂ. ರಾ. ಶಾಂತರೇಣುಕಾರಾಧ್ಯ
ಪ್ರಧಾನ ಕಾರ್ಯದರ್ಶಿ
ರಾಜ್ಯಸಮಿತಿ.

ಹುತಾತ್ಮ ಮಾರುತಿ ಪವಾರ್ ಕುಟುಂಬಕ್ಕೆ ಸಹಾಯನಿಧಿ

ಉ. ಕ. ಜಿಲ್ಲೆಯ ಹಳಿಯಾಳದಲ್ಲಿ ಭೂಸ್ವಾಧೀನ ಚಳವಳಿಯ ಸಂದರ್ಭ ಪೋಲೀಸ್ ಗೋಲಿಬಾರಿಗೆ ಬಲಿಯಾಗಿ ಜೀವತೆತ್ತ ಕಾಂ. ಮಾರುತಿ ಗಣೇಶ ಪವಾರ್ ಇವರ ಕುಟುಂಬಕ್ಕೆ ಸಹಾಯ ನೀಡಲು ಮತ್ತು ಹಳಿಯಾಳ ರೈತರ ಹೋರಾಟ ರಕ್ಷಣಾರ್ಥವಾಗಿಯೂ ನಿಧಿ ಸಂಗ್ರಹಿಸಲು ಕರ್ನಾಟಕ ಪ್ರಾಂತ ರೈತಸಂಘವು ತೀರ್ಮಾನಿಸಿದೆ. ನಿಧಿ ಎತ್ತಲು ಸಹಾಯವಾಗಲು 50 ಪೈಸೆಯ ಕೂಪನ್ನುಗಳನ್ನು ಅಚ್ಚು ಹಾಕಿಸಲಾಗಿದೆ. ರೈತಸಂಘದ ಎಲ್ಲಾ ಜಿಲ್ಲಾ ಘಟಕಗಳಿಗೆ ಇವನ್ನು ಕಳುಹಿಸಿಕೊಡಲಾಗುವುದು. ಆದಷ್ಟು ಶೀಘ್ರ ನಿಧಿ ಸಂಗ್ರಹಿಸಿ ರಾಜ್ಯ ಸಮಿತಿ ಖಜಾಂಚಿಯವರಿಗೆ ಬೆಂಗಳೂರು ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇವೆ.

ಎಚ್. ಮುಗುವಾಳಪ್ಪ
ಅಧ್ಯಕ್ಷ
ಪ್ರಾಂತ ರೈತಸಂಘ.

ಪಿ. ರಾಮಚಂದ್ರರಾವ್
ಪ್ರಧಾನ ಕಾರ್ಯದರ್ಶಿ
ಪ್ರಾಂತ ರೈತಸಂಘ.

ಪಶ್ಚಿಮ ಬಂಗಾಳದ ವಾಮರಂಗ ಸರ್ಕಾರದ ಎರಡು ವರ್ಷಗಳ ಗಮನಾರ್ಹ ಸಾಧನೆ

ಸುಬ್ರತ ಪಾಲ್

ಜೂನ್ 21 ರಂದು ಪ. ಬಂಗಾಳದ ವಾಮರಂಗ ಸರ್ಕಾರವು ತನ್ನ ಅಧಿಕಾರದ ಮೂರನೇ ವರ್ಷಕ್ಕೆ ಕಾಲಿರಿಸಿತು. ಯಾವ ಉತ್ಪ್ರೇಕ್ಷೆಯೂ ಇಲ್ಲದೆ, ಕಳೆದ ಎರಡು ವರ್ಷಗಳ ಅದರ ಸಾಧನೆಗಳು ಗಮನಾರ್ಹವಾದವು ಎಂದು ಹೇಳಬಹುದು. ತನ್ನ ದಾರಿಗಡ್ಡ ಬಂದಿರುವ ತೊಂದರೆಗಳನ್ನು ನಿವಾರಿಸಿಕೊಂಡು ಅದು ಮುನ್ನುಗ್ಗುತ್ತಿದೆ. ಅದರ ಕೊರತೆಗಳನ್ನು ನಾವು ಮರೆತುಬಿಡಬೇಕು ಎಂದಲ್ಲ, ಆದರೆ ಅದರ ಪ್ರಾಮಾಣಿಕತೆಯು ಪ್ರಶ್ನಾತೀತವಾಗಿದೆ.

ಎರಡುವರ್ಷ ಮುಗಿದುದರ ಬಗ್ಗೆ ಮಾತನಾಡುತ್ತ, ಪ.ಬಂಗಾಳದ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿಯಾದ ಮತ್ತು ವಾಮರಂಗ ಸಮಿತಿಯ ಅಧ್ಯಕ್ಷರಾದ ಪ್ರಮೋದ ದಾಸಗುಪ್ತ ಅವರು, ಸರ್ಕಾರದ ಎರಡುವರ್ಷದ ಸಾಧನೆಯನ್ನು 36 ಅಂಶಗಳ ಕಾರ‍್ಯಕ್ರಮದ ಆಧಾರದ ಮೇಲೆ ಅಳೆಯಬೇಕು ಎಂದರು.

36 ಅಂಶಗಳ ಕಾರ್ಯಕ್ರಮದಲ್ಲಿ ಈಗಾಗಲೇ 25 ಅಂಶಗಳನ್ನು ಜಾರಿಗೆ ತರಲಾಗಿದೆ ಅಥವಾ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕಾಮ್ರೇಡ್ ದಾಸಗುಪ್ತ ಅವರು ಹೇಳಿದರು. ಜಾರಿಗೊಳಿಸುವುದರಲ್ಲಿ ರಾಜ್ಯ ಸರ್ಕಾರದ ಅಧಿಕಾರವನ್ನು ಮೀರಿದ ಅಂಶಗಳ ವಿಚಾರದಲ್ಲಿ ಅಗತ್ಯವಾದ ಶಿಫಾರಸುಗಳನ್ನು ಕೇಂದ್ರ ಸರ್ಕಾರಕ್ಕೆ ಮಾಡಲಾಗಿದೆ.

ಹೊಸ ಆಸೆಗಳು ಹೊಸ ಭರವಸೆ:

ವಾಮರಂಗ ಸರ್ಕಾರದ ಸಾಧನೆಗಳನ್ನು ಹೇಳುತ್ತ ದಾಸಗುಪ್ತ ಅವರು, ಅವು ಜನತೆಯಲ್ಲಿ ಅದೂ, ಗ್ರಾಮೀಣ ಜನಸಮೂಹದಲ್ಲಿ ಹೊಸ ಆಸೆಗಳು ಮತ್ತು ಹೊಸ ಭರವಸೆಯನ್ನು ಹುಟ್ಟಿಸಿವೆ ಎಂದರೆ, ದುಷ್ಟಶಕ್ತಿಗಳನ್ನು ವಿರೋಧಿಸದೆ ಈ 36 ಅಂಶಗಳ ಕಾರ‍್ಯಕ್ರಮವನ್ನು ಜಾರಿಗೊಳಿಸುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟ ಎಂದು ಅವರು ಹೇಳಿದರು. ನಗರದ ಮತ್ತು ಗ್ರಾಮಗಳ ದುಷ್ಟಶಕ್ತಿಗಳ ಹಿತಾಸಕ್ತಿಗಳನ್ನು ದಮನಮಾಡದೆ, ದುಡಿಯುವ ವರ್ಗದ, ರೈತರ ಮತ್ತು ಇತರ ಶ್ರಮಜೀವಿಗಳ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ವಾಮರಂಗ ಸರ್ಕಾರದ ಪ್ರತಿ ಸಫಲತೆಯ ಬಗ್ಗೆಯೂ ಪ್ರತಿಗಾಮಿ ಶಕ್ತಿಗಳು ಮತ್ತು ದುಷ್ಟ ಹಿತಾಸಕ್ತಿಗಳು ಕೋಪಗೊಂಡರೆ ಆಶ್ಚರ್ಯವೇನಿಲ್ಲ.

ದುಷ್ಟ ಹಿತಾಸಕ್ತಿಗಳ ವಿರೋಧವಲ್ಲದೆ, ಸಾರಿಗೆ, ಶಿಕ್ಷಣ, ಬಾರ್ಗ ಮುಂತಾದುವುಗಳ ಬಗ್ಗೆ ತೀರ್ಮಾನಗಳನ್ನು ಜಾರಿಗೊಳಿಸುವುದರಲ್ಲಿ ಕಲವು ಕಾನೂನು ತೊಡಕುಗಳನ್ನೂ ವಾಮರಂಗ ಸರ್ಕಾರ ಎದುರಿಸುತ್ತಿದೆ. ಅನೇಕ ಕೇಸುಗಳಲ್ಲಿ ನ್ಯಾಯಾಲಯಗಳು ತಡೆಯಾಜ್ಞೆ ನೀಡಿವೆ. ಜನತೆಯ ಹಿತಾಸಕ್ತಿಗಾಗಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಾಗ ಇಂಥ ಕಾನೂನು ತೊಡಕುಗಳು ಬಾರದಂತೆ ಕ್ರಮಗಳನ್ನು ಕಂಡುಕೊಳ್ಳಬೇಕಾಗಿದೆ ಎಂದು ಕಾಮ್ರೇಡ್ ದಾಸಗುಪ್ತ ಹೇಳಿದರು.

ಕೆಲವೊಮ್ಮೆ ಕೆಲವು ಗುಂಪುಗಳ ಹಿತಾಸಕ್ತಿಗಳೂ ವಾಮರಂಗ ಸರ್ಕಾರದ ಕ್ರಮಗಳಿಗೆ ಅಡ್ಡ ಬರುತ್ತವೆ ಎಂದು ಅವರು ಹೇಳಿದರು. ಎಲ್ಲ ರಾಜಕೀಯ ಖೈದಿಗಳನ್ನು ಕರಾರಿಲ್ಲದೆ ಬಿಡುಗಡೆಮಾಡಿ ಅವರ ವಿರುದ್ಧ ಇರುವ ಕೇಸುಗಳನ್ನು ಹಿಂತೆಗೆದುಕೊಳ್ಳಲಾಗುತ್ತದೆ ಎಂಬ ವಾಮರಂಗ ಮಂತ್ರಿಮಂಡಲದ ತೀರ್ಮಾನವನ್ನು, ತಮ್ಮ ಆದಾಯಕ್ಕೆ ಧಕ್ಕೆ ಬರುತ್ತದೆ ಎಂಬ ಕಾರಣಕ್ಕೆ ನ್ಯಾಯವಾದಿಗಳ ಗುಂಪೊಂದು ವಿರೋಧಿಸಿದ್ದನ್ನು ಅವರು ಸೂಚಿಸಿದರು. 36 ಅಂಶಗಳ ಕಾರ್ಯಕ್ರಮದ ಜಾರಿಯಲ್ಲಿರುವ ದೊಡ್ಡ ಅಡ್ಡಿಗಳಲ್ಲಿ ಅಧಿಕಾರಶಾಹಿಯೂ ಒಂದು ಎಂದು ದಾಸಗುಪ್ತ ಹೇಳಿದರು.

ಜನತೆಯಲ್ಲಿ ಹೊಸ ಕುತೂಹಲ ಮತ್ತು ಭರವಸೆಯನ್ನು ಹುಟ್ಟಿಸಲು ಸಮರ್ಥವಾಗಿರುವುದೇ ವಾಮರಂಗ ಸರ್ಕಾರದ ದೊಡ್ಡ ಸಾಧನೆ.

ಬೆಳೆಯುತ್ತಿರುವ ಜನಬೆಂಬಲ :

ಕಲ್ಕತ್ತದ ಪ್ರೆಸ್‌ಕ್ಲಬ್‌ನಲ್ಲಿ ವರದಿಗಾರರ ಭೇಟಿಯನ್ನು ಜೂನ್ 21 ರಂದು ನಡೆಸಿಕೊಟ್ಟ ಮುಖ್ಯಮಂತ್ರಿ ಜ್ಯೋತಿ ಬಸು ಅವರು, ಹಿಂದೆಂದೂ ಇಲ್ಲದಂತೆ ಇಂದು ಗ್ರಾಮೀಣ ಜನತೆ ಹೆಚ್ಚು ಸ್ಫೂರ್ತಿ ಮತ್ತು ಕುತೂಹಲಗಳನ್ನು ಬೆಳೆಸಿಕೊಂಡಿದ್ದಾರೆಂದು ಹೇಳಿದರು. ವಾಮರಂಗ ಸರ್ಕಾರಕ್ಕಿರುವ ಜನಬೆಂಬಲ ವೇಗವಾಗಿ ಹೆಚ್ಚುತ್ತಿದೆ. ಜನತೆಯ ಎಲ್ಲ ಕುಂದುಕೊರತೆಗಳನ್ನು ನಿವಾರಿಸಲಾಗಿದೆ ಎಂದಲ್ಲ. ಆದರೆ ಸದ್ಯದ ಸರ್ಕಾರವು ಪ್ರಾಮಾಣಿಕತೆಯಿಂದ ತಮ್ಮ ಪ್ರಯೋಜನಕ್ಕಾಗಿ ಕೆಲಸಮಾಡುತ್ತಿದೆ ಎಂಬುದನ್ನು ಜನ ಅರಿತುಕೊಂಡಿದ್ದಾರೆ. ಹಿಂದೆ ಅವರಿಗೆ ಈ ಅನುಭವವು ಆಗಿರಲಿಲ್ಲ.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಕೆಲವು ಸಾಧನೆಗಳನ್ನು ಬಸು ಅವರು ಎತ್ತಿ ಹೇಳಿದರು. ಕೆಲಸಗಾರರು ಮತ್ತು ನೌಕರರ ಎಲ್ಲ ಗುಂಪುಗಳೂ ತಮ್ಮ ಬಹುಕಾಲದ ಬೇಡಿಕೆಗಳನೇಕವನ್ನು ಈಡೇರಿಸಿಕೊಂಡಿವೆ. ಕೆಲವು ಕಡೆ ತಿಂಗಳುಗಟ್ಟಲೆ ಮುಷ್ಕರವನ್ನು ಅವು ನಡೆಸಬೇಕಾಗಿತ್ತು. ಆದರೆ ಅವೆಲ್ಲವೂ ಶಾಂತಿಯುತವಾಗಿ ನಡೆದಿವೆ.

ದುಡಿಯುವವರ್ಗದ ವಿಜಯಗಳು:

ಪ. ಬಂಗಾಳದ ದುಡಿಯುವ ವರ್ಗಕ್ಕೆ ಕಳೆದ ಎರಡು ವರ್ಷಗಳಲ್ಲಿ ದೊಡ್ಡ ವಿಜಯಗಳು ದೊರೆತಿವೆ. ಈ ಅವಧಿಯನ್ನು ಎರಡು ಮುಖ್ಯ ಹಂತಗಳಾಗಿ ವಿಂಗಡಿಸಬಹುದು. ಮೊದಲ ಹಂತದಲ್ಲಿ ವಾಮರಂಗ ಸರ್ಕಾರವು ಅಧಿಕಾರಕ್ಕೆ ಬಂದು, ಕಳೆದು ಹೋಗಿದ್ದ ಹಕ್ಕುಗಳನ್ನು ಪುನಃಸ್ಥಾಪಿಸಿತು. ವೇತನಕ್ಕಾಗಿ ಹೋರಾಟಗಳು ನಡೆದಿದ್ದವು. ಆದರೆ ಹಿಂದಿನ ಕಾಂಗ್ರೆಸ್ ಸರ್ಕಾರವು ಕಿತ್ತುಕೊಂಡಿದ್ದ ಪ್ರಜಾಪ್ರಭುತ್ವವಾದಿ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮತ್ತೆ ಕೊಡಲಾಯಿತು.

1978-79ರ ಎರಡನೇ ಹಂತದಲ್ಲಿ ವೇತನ ಏರಿಕೆ, ಬೋನಸ್, ತುಟ್ಟಿಭತ್ಯ ಮುಂತಾದ ಬೇಡಿಕೆಗಳಿಗೆ ಅನೇಕ ಸಣ್ಣ ಮತ್ತು ದೊಡ್ಡ ಹೋರಾಟಗಳು ನಡೆದವು. ಈ ಹೋರಾಟಗಳಲ್ಲಿ ಅನೇಕವು ದುಡಿಯುವ ವರ್ಗದ ಗಮನಾರ್ಹ ವಿಜಯಗಳನ್ನು ಗಳಿಸಿದವು.

1978-79ರಲ್ಲಿ ಸೆಣಬು, ಇಂಜಿನಿಯರಿಂಗ್ ಮತ್ತು ನೇಯ್ಗೆ ಕೈಗಾರಿಕೆಗಳಲ್ಲಿ ಮೂರು ದೊಡ್ಡ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. 49 ದಿನಗಳವರೆಗೆ ನಡೆದ ಅನಿರ್ದಿಷ್ಟ ಮುಷ್ಕರವನ್ನು ಸೆಣಬು ಕೆಲಸಗಾರರು ನಡೆಸಬೇಕಾಯಿತು. ಯೋಜಿತ ಅನಿರ್ದಿಷ್ಟ ಮುಷ್ಕರಕ್ಕೆ ಸ್ವಲ್ಪ ಮುಂಚೆ ಇಂಜಿನಿಯರಿಂಗ್ ಕೈಗಾರಿಕೆಯ ಮಾಲೀಕರು, ಕೆಲಸಗಾರರ ಬೇಡಿಕೆಗೆ ಮಣಿಯಬೇಕಾಯಿತು. ಬಾಟಾ ಕೆಲಸಗಾರರ ಮುಷ್ಕರ ನಾಲ್ಕು ತಿಂಗಳ ಕಾಲ ನಡೆಯಿತು. ಜಯ್ ಇಂಜಿನಿಯರಿಂಗ್ ಕೆಲಸಗಾರರು ಇನ್ನೊಂದು ಅದ್ಭುತ ಮುಷ್ಕರ ನಡೆಸಿದರು.

ಇದುವರೆಗೆ ಅಸಂಘಟಿತರಾಗಿದ್ದ ವಲಯಗಳ ಕೆಲಸಗಾರರು ಮತ್ತು ನೌಕರರು ಸಂಘಟಿತರಾಗಲು ಪ್ರಯತ್ನ ನಡೆಸಿದ್ದು ಈ ಅವಧಿಯ ಹೊಸ ಅಂಶವಾಗಿದೆ. ಇದು ಅವರಿಗೆ ಅನೇಕ ವಿಜಯಗಳನ್ನು ತಂದಿತ್ತಿದೆ. ಉದಾಹರಣೆಗೆ ಹತ್ತು ವರ್ಷಗಳಿಂದ ನಿಲ್ಲಿಸಲಾಗಿದ್ದ ವೇತನ ಏರಿಕೆಯನ್ನು ಮುದ್ರಣಾಲಯ ಕೆಲಸಗಾರರಿಗೆ ಕೊಡಲಾಯಿತು.

ಶಿಕ್ಷಣ ರಂಗದಲ್ಲಿ ತುಂಬ ಶಿಸ್ತನ್ನು ಕಾಪಾಡಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಎಲ್ಲೂ ಕಾಪಿ ಮಾಡುತ್ತಿದ್ದುದನ್ನು ಈಗ ಸಾಕಷ್ಟು ತಡೆಯಲಾಗಿದೆ. ಸರಿಯಾದ ಕಾಲಕ್ಕೆ ಪರೀಕ್ಷೆಗಳು ನಡೆದು, ಫಲಿತಾಂಶಗಳು ಪ್ರಕಟವಾಗುವ ಹಾಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಆರ್ಥಿಕತೆಯ ಮೇಲೆ ಹಣದುಬ್ಬರದ ಒತ್ತಡಗಳನ್ನು ತರುತ್ತದೆ ಎಂಬ ಆಧಾರದ ಮೇಲೆ ಕೆಲಸಕ್ಕಾಗಿ ಆಹಾರ ಕಾರ್ಯಕ್ರಮವನ್ನು ಕೇಂದ್ರವು ಇಳಿಸುವ ಅಥವಾ ನಿಲ್ಲಿಸುವ ವರದಿಗಳ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಾ ಜ್ಯೋತಿಬಸು ಅವರು, ಈ ಅಂಶ ಆಧಾರರಹಿತವಾದದ್ದು ಎಂದರು. ನೈಸರ್ಗಿಕ ಹಾನಿಗಳು ಮತ್ತು ವರ್ಷದ ಹೆಚ್ಚುವರಿ ಅವಧಿಗಳಲ್ಲಿ ಈ ಕಾರ್ಯಕ್ರಮ ಜನತೆಯನ್ನು ಕಾಪಾಡುತ್ತದೆ ಎಂದು ಹೇಳಿದರು.

ರಾಜ್ಯ ಆಡಳಿತ ಮತ್ತು ಪಂಚಾಯತುಗಳ ಸಂಬಂಧದ ಬಗ್ಗೆ, ಪಂಚಾಯತ್‌ಗಳ ಜೊತೆ ಸಮನ್ವಯದಿಂದ ಕೆಲಸಮಾಡುವ ಅನುಭವವು ಆಡಳಿತ ಅಧಿಕಾರಿಗಳಿಗೆ ಈ ಹಿಂದೆ ಇರಲಿಲ್ಲ ಎಂದು ಅವರು ಹೇಳಿದರು. ಪಂಚಾಯತ್‌ಗಳ ಜೊತೆ ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಬ್ಲಾಕ್‌ಡೆವಲಪ್‌ಮೆಂಟ್ ಅಧಿಕಾರಿಗಳು ಸೌಹಾರ್ದದಿಂದ ಕೆಲಸಮಾಡಿದರೆ ಕಾರ್ಯ ಇನ್ನಷ್ಟು ಸುಗಮವಾಗುತ್ತದೆ ಎಂದು ಅವರು ಹೇಳಿದರು.

ಆಳವಾದ ಪಿತೂರಿ :

ಇತರ ರಾಜ್ಯಗಳ ಜೊತೆ ಹೋಲಿಸಿದರೆ, ಪ. ಬಂಗಾಳದಲ್ಲಿ ಗ್ರಾಮೀಣ ನಿರುದ್ಯೋಗವನ್ನು ಕಡಿಮೆಮಾಡಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ವಾಮರಂಗ ಸರ್ಕಾರ ಕೈಗೊಂಡ ಅನೇಕ ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಂದ ಇದು ಸಾಧ್ಯವಾಯಿತು. ಉದ್ಯೋಗವಿನಿಮಯ ಕೇಂದ್ರಗಳ ಮುಖಾಂತರ ನೇಮಕಾತಿಗಳನ್ನು ಮಾಡಿಕೊಳ್ಳುವ ವಾಮರಂಗ ಸರ್ಕಾರದ ನೀತಿಯಿಂದ ನಿರುದ್ಯೋಗಿಗಳು ಹೆಚ್ಚುಹೆಚ್ಚಾಗಿ ವಿನಿಮಯ ಕೇಂದ್ರಗಳಲ್ಲಿ ತಮ್ಮನ್ನು ದಾಖಲು ಮಾಡಿಕೊಳ್ಳುವಂತೆ ಆಗಿದೆ.

ಎರಡು ಕಾಂಗ್ರೆಸ್‌ಗಳು ಮತ್ತು ಜನತಾಪಕ್ಷದ ಪ್ರತಿಗಾಮಿ ಶಕ್ತಿಗಳು ವಾಮರಂಗ ಸರ್ಕಾರದ ವಿರುದ್ಧ ಆಳವಾದ ಪಿತೂರಿ ನಡೆಸುತ್ತಿವೆ ಎಂದು ಅವರು ಒಂದು ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದರು. ಜನತೆಯ ಹಿತಾಸಕ್ತಿಯನ್ನು ಕಾಪಾಡಲು ಕ್ರಮಗಳನ್ನು ಕೈಗೊಂಡಾಗ ಈ ಶಕ್ತಿಗಳು ಹುಯಿಲೆಬ್ಬಿಸುತ್ತವೆ. ಅಮ್ರಬಂಗಾಲಿಯಂಥ ಕೋಮು ಮತ್ತು ಮತಾಂಧ ಶಕ್ತಿಗಳಿಗೆ ಪ. ಬಂಗಾಳದ ನೆಲದಲ್ಲಿ ಸ್ಥಾನವೇ ಇಲ್ಲ-ಅವು ದೇಶದ ಶತ್ರು ಮತ್ತು ಬಂಗಾಲಿಗಳ ಮೇಲಿನ ಕಳಂಕ ಎಂದು ಅವರು ನುಡಿದರು.

ಏರುತ್ತಿರುವ ಬೆಲೆಗಳು ನಿಜವಾಗಿಯೂ ಒಂದು ಗಂಭೀರ ಸಮಸ್ಯೆಯಾಗಿದೆ ಎಂದು ಮುಖ್ಯಮಂತ್ರಿ ಬಸು ಹೇಳಿದರು. ಆದರೆ ರಾಜ್ಯದ ಬಜೆಟ್ ಇದಕ್ಕೆ ಯಾವ ತರದಲ್ಲೂ ಹೊಣೆಯಲ್ಲ. ಅಗತ್ಯವಸ್ತುಗಳ ಬೆಲೆ ಏರಿಕೆಯ ಕಾರಣಗಳಲ್ಲಿ ಕೇಂದ್ರ ಬಜೆಟಿನ ಹೊಸ ತೆರಿಗೆ ಕ್ರಮಗಳೂ ಒಂದಾಗಿದೆ. ಹಣದುಬ್ಬರ ಮತ್ತು ಅಪ್ರಾಮಾಣಿಕ ವರ್ತಕರು ಇನ್ನಿತರ ಕಾರಣಗಳಾಗಿವೆ.

ವಾಮರಂಗ ಸರ್ಕಾರವು ಎದುರಿಸಬೇಕಾದ ಕಷ್ಟಗಳನ್ನು ಹೇಳುತ್ತಾ, ಪ್ರವಾಹಗಳು ಮತ್ತು ದಂಡಕಾರಣ್ಯ ನಿರಾಶ್ರಿತರು ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಕಾಲ ಮತ್ತು ಹಣ ಎರಡೂಬೇಕು ಎಂದರು.

ರಾಜ್ಯದ ಶಾಂತಿಯುತ ವಾತಾವರಣ ಮತ್ತು ಕೋಮು ಸೌಹಾರ್ದತೆಯನ್ನು ಕಲಕುವ ಪ್ರಯತ್ನಗಳೂ ಸೇರಿದ ಹಾಗೆ, ವಾಮರಂಗ ಸರ್ಕಾರದ ವಿರುದ್ಧ ಚಟುವಟಿಕೆಗಳನ್ನು ನಡೆಸುವ ಶಕ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಆ ದಿನ ಮುಖ್ಯಮಂತ್ರಿಗಳು ರೇಡಿಯೋ ಮತ್ತು ದೂರದರ್ಶನಗಳ ಮುಖಾಂತರ ಜನತೆಗೆ ಮನವಿಮಾಡಿದರು.

ಹಿಂದಿನ ಕಾಂಗ್ರೆಸ್ ಆಳಿಕೆಯಲ್ಲಿ ವಿರೋಧ ಪಕ್ಷದ ಎಲ್ಲ ಹಕ್ಕುಗಳನ್ನು ತುಳಿಯಲಾಗಿತ್ತು. ಜನತೆಯ ಮೇಲೆ ಭೀಕರ ದಬ್ಬಾಳಿಕೆ ನಡೆಸಲಾಗುತ್ತಿತ್ತು. ಈ ಪರಿಸ್ಥಿತಿಯು ವಾಪಸ್ಸು ಬರಲು ಎಂದೂ ಸಾಧ್ಯವಿಲ್ಲವೆಂದು ಜ್ಯೋತಿ ಬಸು ಹೇಳಿದರು. ಪ್ರಸ್ತುತ ಸರ್ಕಾರದ ನೀತಿಯ ಪ್ರಕಾರ, ವಿರೋಧ ಪಕ್ಷದವರೂ ಸೇರಿದಂತೆ ಎಲ್ಲ ಪ್ರಜೆಗಳಿಗೆ ಪ್ರಜಾಪ್ರಭುತ್ವವಾದಿ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳನ್ನು ಸಂಪೂರ್ಣವಾಗಿ ನೀಡಲಾಗಿದೆ. ರಾಜಕೀಯ ಘರ್ಷಣೆಗಳು ಇದ್ದರೆ ಪೋಲೀಸರು ಮತ್ತು ಆಡಳಿತ ಮಧ್ಯೆ ಪ್ರವೇಶಿಸಬಾರದೆಂದು ಸೂಚನೆ ನೀಡಲಾಗಿದೆ.

ಆರ್ಥಿಕ ಚಟುವಟಿಕೆಗಳು :

ವಾಮರಂಗ ಸರ್ಕಾರದ ಎರಡು ವರ್ಷಗಳು ಪೂರ್ಣಗೊಂಡ ಸಂದರ್ಭದಲ್ಲಿ ಹಣಕಾಸು ಸಚಿವ ಅಶೋಕ್ ಮಿತ್ರ ಅವರು ಕೆಲವು ಆರ್ಥಿಕ ಚಟುವಟಿಕೆಗಳನ್ನು ವಿವರಿಸಿದರು.

ರಾಜ್ಯದಲ್ಲಿ ಸರ್ಕಾರ ಸ್ಥಾಪಿಸಿದರೆ ಜನತೆಯ ಎಲ್ಲ ಮೂಲಭೂತ ಸಮಸ್ಯೆಗಳನ್ನೂ ನಿವಾರಿಸುತ್ತೇವೆಂದು ವಾಮರಂಗ ಎಂದೂ ಹೇಳಿಕೊಂಡಿಲ್ಲವೆಂಬುದನ್ನು ಮರೆಯಬಾರದು ಎಂದು ಅವರು ಹೇಳಿದರೆ ಅಥವಾ 36 ಅಂಶಗಳ ಕಾರ‍್ಯಕ್ರಮ ಸಮಾಜವಾದಿ ಕಾರ್ಯಕ್ರಮವೆಂದೂ ಹೇಳಿಕೊಂಡಿಲ್ಲ ಎಂದರು.

ದಾರಿದ್ರ್ಯರೇಖೆಯ ಕೆಳಗೆ ಜೀವಿಸುತ್ತಿರುವ ಗ್ರಾಮೀಣ ಜನತೆಯ ಜೀವನ ಮಟ್ಟವನ್ನು ಸುಧಾರಿಸದಿದ್ದರೆ ಆರ್ಥಿಕ

[7ನೇ ಪುಟ ನೋಡಿ]

ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಪೊಲಿಟ್‌ಬ್ಯೂರೊ ಕರೆ

ಜೂನ್ 30 ಮತ್ತು ಜುಲೈ 1 ಮತ್ತು 2 ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊ, ಪತ್ರಿಕೆಗಳಿಗೆ ಜುಲೈ 2ರಂದು ಈ ಹೇಳಿಕೆಯನ್ನಿತ್ತಿದೆ:

ತಡೆಯೊಡ್ಡದಿದ್ದರೆ ಮತ್ತೆ ಸರ್ವಾಧಿಕಾರವು ಎಚ್ಚೆತ್ತುಕೊಳ್ಳುವ ಅಪಾಯವನ್ನು ತರುವ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಯ ಐಕ್ಯತೆ ಮತ್ತು ದೃಢತೆಯನ್ನು ಒಡೆಯುವ ಇತ್ತೀಚಿನ ಕೆಲವು ಬೆಳವಣಿಗೆಗಳ ಬಗ್ಗೆ, ದೇಶದ ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಕಾಳಜಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊ ಹಂಚಿಕೊಳ್ಳುತ್ತದೆ.

ಆದರೆ, ಈ ಪರಿಸ್ಥಿತಿಯ ಕೆಲವು ನೇತ್ಯಾತ್ಮಕ ವಿಚಾರಗಳು ಕೆಲವು ಅನುಕೂಲ ಬೆಳವಣಿಗೆಗಳನ್ನೇ ತಂದಿದ್ದು, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳು ಇವುಗಳನ್ನು ಉಪಯೋಗಿಸಿಕೊಂಡರೆ, ಆರ್ಥಿಕಸ್ಥಿತಿ ಮತ್ತು ದೇಶದ ರಾಜಕೀಯವನ್ನು ಆವರಿಸುತ್ತಿರುವ ಬಿಕ್ಕಟ್ಟಿನ ನೇತ್ಯಾತ್ಮಕ ಪರಿಣಾಮಗಳನ್ನು ಪರಿಹರಿಸಬಹುದು ಎಂದು ಪೊಲಿಟ್‌ಬ್ಯೂರೊ ಸೂಚಿಸುತ್ತದೆ.

ಈ ಅನುಕೂಲ ಬೆಳವಣಿಗೆಗಳಲ್ಲಿ, ಕರ್ನಾಟಕ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಅವರ ಸಹೋದ್ಯೋಗಿಗಳಿರುವ ಕಾಂಗ್ರೆಸ್ (ಐ) ಗುಂಪು ದಂಗೆ ಮಾಡಿರುವ ಮತ್ತು ಪಕ್ಷದೊಳಗೆ ಪುನರ್ ಹೊಂದಾಣಿಕೆ ನಡೆಸಿ, ಪಕ್ಷದ ಹೊರಗಿನ ಸಮಾನ ಮನೋಭಾವದ ಅಂಶಗಳೊಡನೆ ಹೇಗೆ ಸಂಬಂಧಸ್ಥಾಪಿಸಿಕೊಳ್ಳಬೇಕೆನ್ನುವ ವಿಚಾರದಲ್ಲಿ, ಮೊದಲಿನ ಸೋಷಲಿಸ್ಟ್ ಪಕ್ಷದ ನಾಯಕರಾದ ಮಧುಲಿಮಯೆ ಮತ್ತು ಜಾರ್ಜ್ ಫರ್ನಾಂಡಿಸ್ ಅವರ ಅಭಿಪ್ರಾಯಗಳನ್ನೂ ಪೊಲಿಟ್‌ಬ್ಯೂರೊ ಗಮನಿಸುತ್ತದೆ.

ಮೇ ಹದಿನೇಳರ ಅಭಿಪ್ರಾಯ ವಿನಿಮಯದಲ್ಲಿ ಭಾಗವಹಿಸಿದ್ದವರು ಸಾಧಿಸಿದ್ದ ಹೊಂದಾಣಿಕೆಯ ಹಿನ್ನೆಲೆಯಲ್ಲಿ ನಡೆದ ಈ ಬೆಳವಣಿಗೆಗಳು ಸರ್ವಾಧಿಕಾರ ಮತ್ತು ಕೋಮುವಾದಗಳೆಂಬ ಎರಡು ಅಪಾಯಗಳ ವಿರುದ್ಧ ಎಲ್ಲ ಸರ್ವಾಧಿಕಾರವಿರೋಧಿ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸಲು ಒಳ್ಳೆಯ ಅವಕಾಶವನ್ನಿತ್ತಿವೆ.

ಜನತಾ ಆಡಳಿತದ 27 ತಿಂಗಳುಗಳಲ್ಲಿ ಮೂಡಿರುವ ಪರಿಸ್ಥಿತಿಯ ನೇತ್ಯಾತ್ಮಕ ಅಂಶಗಳ ದೃಷ್ಟಿಯಿಂದ ಇಂಥ ವಿಶಾಲ ಒಗ್ಗೂಡಿಕೆಯ ಅಗತ್ಯವು ತುಂಬ ಹೆಚ್ಚಾಗುತ್ತಿತ್ತು. ಹಿಂದಿನ ಕಾಂಗ್ರೆಸ್ ಸರ್ಕಾರದ ಹಾಗೆಯೇ ಜನತಾ ಸರ್ಕಾರವು ಅನುಸರಿಸುತ್ತಿರುವ ನೀತಿಗಳು ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟನ್ನು ಇನ್ನಷ್ಟು ವೇಗವಾಗಿ ಗಂಭೀರಗೊಳಿಸುತ್ತಿವೆ.

ಕಾಳಸಂತೆಕೋರರು, ಕಳ್ಳಸಾಗಾಣಿಕೆದಾರರು ವಿಪರೀತ ಲಾಭಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಹಿಂದಿನ ಕಾಂಗ್ರೆಸ್ ಸರ್ಕಾರದಂತೆಯೇ ಜನತಾ ಸರ್ಕಾರದ ಆರ್ಥಿಕ ನೀತಿಯೂ ಕೂಡ, ಭಾರತೀಯ ಮತ್ತು ವಿದೇಶಿ ಏಕಸ್ವಾಮ್ಯಗಾರರ ಹೊಂದಾಣಿಕೆ ಹೆಚ್ಚಲು ಸಹಾಯಮಾಡಿ, ಆರ್ಥಿಕ ಸ್ಥಿತಿಯು ಬಹುರಾಷ್ಟ್ರೀಯ ಕಂಪನಿಗಳ ಶೋಷಣಾರಂಗವಾಗುವಂತೆ ಮಾಡಿದೆ.

ತೀವ್ರ ಭ್ರಮನಿರಸನ :

ಇಂಥ ಪರಿಸ್ಥಿತಿಯಲ್ಲಿ ದುಡಿಯುವ ಜನತೆ ತೀವ್ರವಾಗಿ ಭ್ರಮನಿರಸನ ಹೊಂದಿ, ತಮ್ಮ ಜೀವನಮಟ್ಟದ ರಕ್ಷಣೆಗಾಗಿ ಹೋರಾಟದ ಹಾದಿಯನ್ನು ಹಿಡಿದರೆ ಆಶ್ಚರ್ಯವೇನಿಲ್ಲ. ಸಂಘಟಿತ ದುಡಿಯುವ ವರ್ಗ ಮತ್ತು ಮಧ್ಯಮ ವರ್ಗದ ನೌಕರರು, ಮುಷ್ಕರಗಳೂ ಸೇರಿದ ಹಾಗೆ ಅನೇಕ ವಿಧದಲ್ಲಿ ಕ್ರಿಯಾತ್ಮಕವಾಗತೊಡಗಿದ್ದಾರೆ. ಹಲವಾರು ಮಂತ್ರಿಗಳೂ ಸೇರಿದ ಹಾಗೆ ಅನೇಕ ಜನತಾ ನಾಯಕರು ಭರವಸೆ ನೀಡಿದ್ದ ತಮ್ಮ ಬೋನಸ್ಸನ್ನು ಪಡೆಯಲು ರೈಲ್ವೆ ಕೆಲಸಗಾರರು ದೇಶದಾದ್ಯಂತ ಮುಷ್ಕರ ನಡೆಸಲು ಹವಣಿಸುತ್ತಿದ್ದಾರೆ. ಕೆಲಸಗಾರರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒಲಿಸಿದ್ದರಿಂದ ಕೊನೆಗಳಿಗೆಯಲ್ಲಿ ಕಲ್ಲಿದ್ದಲು ಮತ್ತು ಉಕ್ಕು ಕೈಗಾರಿಕೆಗಳ ಕೆಲಸಗಾರರ ಮುಷ್ಕರ ಆದರೆ ಸರ್ಕಾರ ಇಡೀ ಪರಿಸ್ಥಿತಿಯ ಬಗ್ಗೆ ಕಣ್ಣು ಮುಚ್ಚಿ ಕುಳಿತಿತ್ತು. ಅದು ಎಚ್ಚೆತ್ತಾಗ ಬೆದರಿಕೆಗಳು, ಗೋಲಿಬಾರ್ ಮತ್ತು ಸೆರೆಮನೆ--ಈ ವಿಧಾನಗಳನ್ನು ಬಿಟ್ಟರೆ ಪರಿಸ್ಥಿತಿಯನ್ನು ನಿವಾರಿಸಲು ಬೇರೆ ದಾರಿಯೇ ಅದಕ್ಕೆ ಕಾಣಲಿಲ್ಲ. ಸಿ.ಐ.ಎಸ್.ಎಫ್. ಪ್ರತಿನಿಧಿಗಳನ್ನು ಮಾತುಕತೆಗೆ ಎಂದು ದೆಹಲಿಗೆ ಕರೆಸಿಕೊಂಡು ಅವರನ್ನು ಜೈಲಿಗೆ ಕಳುಹಿಸಿದ್ದು ತೀರ ವಂಚನೆಯ ದಾರಿ.

ಸ್ಥಾನಬದ್ಧತೆ :

ಈ ಬೆಳವಣಿಗೆಗಳಿಂದ ಪಾಠ ಕಲಿಯಲು ಸರ್ಕಾರ ನಿರಾಕರಿಸುತ್ತದೆ. ಕೈಗಾರಿಕಾ ಕಾರ್ಮಿಕರಿಂದ ಹಿಡಿದು ಆಡಳಿತ ಯಂತ್ರದ ಸಿಬ್ಬಂದಿಯವರೆಗೆ ಜನತೆಯಲ್ಲಿ ಬೆಳೆಯುತ್ತಿರುವ ಅಸಮಾಧಾನಕ್ಕೆ ರಾಜಕೀಯ ಪರಿಹಾರವನ್ನು ಕಂಡುಹಿಡಿಯುವುದರ ಬದಲು ಸರ್ಕಾರದ ನಾಯಕರು ಇದು "ಅಶಿಸ್ತನ್ನು ಹತ್ತಿಕ್ಕುವ" ಸಮಸ್ಯೆ ಎನ್ನುವ ಹಾಗೆ ಮಾತನಾಡುತ್ತಿದ್ದಾರೆ. ಪ್ರಧಾನ ಮಂತ್ರಿಗಳ ಜೂನ್ 25ರ ಪತ್ರಿಕಾ ಭೇಟಿ, ಸರ್ಕಾರ ಯೋಚಿಸುತ್ತಿರುವ ಧೋರಣೆಯನ್ನು ಸೂಚಿಸುತ್ತದೆ. ಒಂದು ಕಡೆ, ತಮ್ಮ ಸರ್ಕಾರವು ಸ್ಥಾನಬದ್ಧತೆ ಕಾಯ್ದೆಯನ್ನು ಜಾರಿಗೆ ತರುವ ಶಾಸನವನ್ನು ತರುವುದೆಂದು ಹೇಳಿದರು. ಇನ್ನೊಂದು, ಬೋನಸ್ಸನ್ನು ನೀಡುವ ಪ್ರಶ್ನೆಯೇ ಇಲ್ಲವೆಂದು ಹೇಳಿದರು. ಪ್ರಧಾನಮಂತ್ರಿ ನೀಡಿದ ಈ ವರ್ಗದ ಮೇಲೆ ಮತ್ತು ಅವರ ಟ್ರೇಡ್ ಯೂನಿಯನ್ ಹಕ್ಕುಗಳ ಮೇಲೆ ಮಾಡುತ್ತಿರುವ ದಾಳಿ ಎಂದು ಪೊಲಿಟ್ ಬ್ಯೂರೊ ಜನತೆಗೆ ಎಚ್ಚರಿಸುತ್ತದೆ. ತುರ್ತುಪರಿಸ್ಥಿತಿ ಆಡಳಿತ ಆರಂಭವಾದದ್ದು ಹೀಗೆಯೇ. ಕಾರ್ಮಿಕವರ್ಗದ ಮೇಲೆ ಮಾಡುವ ದಾಳಿಯನ್ನು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ಮೇಲೆ ನಡೆಸುವ ದಾಳಿ ಹಿಂಬಾಲಿಸುತ್ತದೆ. ಸ್ಥಾನಬದ್ಧತೆ ಮಸೂದೆಯ ಮಾತು, ಒಂದು ಸರ್ವಾಧಿಕಾರಿ ಆಡಳಿತದತ್ತ ನಡೆಯುವುದಕ್ಕೆ ಮುನ್ಸೂಚನೆಯಾಗಬಹುದು.

ಈಶಾನ್ಯ ಪ್ರದೇಶ :

ಜನತಾಪಕ್ಷದ ಪ್ರಜಾಸತ್ತಾತ್ಮಕ ವಿರೋಧಿ ನಿಲುವುಗಳು ಅದು, ಪ. ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ನೇಪಾಳೀಯರು, ಉತ್ತರ ಪ್ರದೇಶ, ಬಿಹಾರ ಮತ್ತು ಅಸ್ಸಾಂ, ಸಿಕ್ಕಿಂ ರಾಜ್ಯ ಇವುಗಳ ರಾಷ್ಟ್ರೀಯ ಅಲ್ಪಸಂಖ್ಯಾತರ ಬಗ್ಗೆ ಹೊಂದಿರುವ ದೃಷ್ಟಿಕೋನದಿಂದಲೂ ವ್ಯಕ್ತವಾಗುತ್ತವೆ. ಭಾರತ ಒಕ್ಕೂಟದ ವಿಶಾಲ ಭಾಗಗಳಲ್ಲಿ ಜನತೆಯ ಸಾಕಷ್ಟು ಸಂಖ್ಯೆಯು ಆಡುವ ನೇಪಾಳಿ ಭಾಷೆಯನ್ನು ಪ್ರಧಾನಮಂತ್ರಿಗಳು "ವಿದೇಶಿ ಭಾಷೆ" ಎಂದು ವರ್ಗೀಕರಿಸಿದರು. ಮಿಜೋಗಳ ಬಗ್ಗೆ ಅನುಸರಿಸಲಾದ ದಬ್ಬಾಳಿಕೆ ಕ್ರಮಗಳು, ನಾಗಾಗಳ ಬಗ್ಗೆ ಮತ್ತು ಈಶಾನ್ಯ ಪ್ರದೇಶದ ಇತರ ಗಿರಿಜನರ ಬಗ್ಗೆ ಅನುಸರಿಸಲಾದ ನೇತ್ಯಾತ್ಮಕ ಧೋರಣೆಗಳು ಇವುಗಳಿಂದ ಆ ಗುಂಪುಗಳ ಜೊತೆ ಇರಬೇಕಾಗಿದ್ದ ಸಂಬಂಧಗಳು ಕಡಿದು ಹೋಗಿವೆ. ಪ್ರಜಾಪ್ರಭುತ್ವವಾದಿ ಕ್ರಮಗಳಿದ್ದ ಆ ಗುಂಪುಗಳ ಜೊತೆ ಮೈತ್ರಿ ಸಾಧಿಸಬೇಕಾಗಿತ್ತು. ತ್ರಿಪುರಾ ರಾಜ್ಯದಲ್ಲಿ ಗಿರಿಜನರು ಮತ್ತು ಗಿರಿಜನರಲ್ಲದವರ ನಡುವೆ ಇರುವ ಘರ್ಷಣೆಯನ್ನು ಅಲ್ಲಿನ ವಾಮರಂಗ ಸರ್ಕಾರವು ಪ್ರಜಾಸತ್ತಾತ್ಮಕ ವಿಧಾನದಲ್ಲಿ ಪರಿಹರಿಸಲು ಯತ್ನಿಸುತ್ತಿದೆ ಎಂಬುದನ್ನು ಸೂಚಿಸಲು ಪೊಲಿಟ್‌ಬ್ಯೂರೊ ಇಚ್ಛಿಸುತ್ತದೆ. ಗಿರಿಜನರ ನ್ಯಾಯಬದ್ಧ ಬೇಡಿಕೆಗಳು ಮತ್ತು ಸಮಾಜದ ದುರ್ಬಲ ವರ್ಗಗಳ ಪ್ರಜಾಪ್ರಭುತ್ವವಾದಿ ಹಕ್ಕುಗಳನ್ನು ಈಡೇರಿಸಿಕೊಟ್ಟು, ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಗಿರಿಜನರು ಮತ್ತು ಗಿರಿಜನರಲ್ಲದವರಿಬ್ಬರೂ ಒಟ್ಟಾಗಿ ಪ್ರಯತ್ನ ಮಾಡುವಂತೆ ಇಬ್ಬರಿಗೂ ಶಿಕ್ಷಣ ನೀಡಲಾಗುತ್ತಿದೆ. ಆದ್ದರಿಂದಲೇ ತ್ರಿಪುರಾ ಸರ್ಕಾರವು ಮತಾಂಧರಿಂದ ಆಕ್ರಮಣಕ್ಕೊಳಗಾಗಿದೆ. ದುರಾದೃಷ್ಟದಿಂದ ಅವರಿಗೆ ಇಂದಿರಾಕಾಂಗ್ರೆಸ್, ಸ್ವರಣ್‌ಸಿಂಗ್ ಕಾಂಗ್ರೆಸ್, ಸಿ.ಎಫ್.ಡಿ. ಮತ್ತು ಜನತಾ ಪಕ್ಷಗಳ ಸ್ಥಳೀಯ ಘಟಕಗಳ ಬೆಂಬಲ ಸಿಕ್ಕಿದೆ. ಜನತಾ ಸರ್ಕಾರ ಮತ್ತು ಕೇಂದ್ರದಲ್ಲಿರುವ ಅದರ ನಾಯಕತ್ವಗಳು ತ್ರಿಪುರಾದ ವಾಮರಂಗ ಸರ್ಕಾರದ ಧೋರಣೆಯನ್ನೇ ದೇಶದಾದ್ಯಂತ

ಅಧಿಕಾರದ ಉಳಿವಿಗೆ ನೇತ್ಯಾತ್ಮಕ ವಿಚಾರಗಳ ವಿರುದ್ಧ ಹೋರಾಟ

ಎದ್ದಿರುವ ವಿಚಾರವೂ ಇದೆ. ಕಾಂಗ್ರೆಸ್ (ಐ) ಮತ್ತು ಕಾಂಗ್ರೆಸ್ ನಾಯಕರು ಪ್ರತಿಕ್ರಿಯೆ ಸೂಚಿಸಿರುವ, ಸರ್ವಾಧಿಕಾರ ವಿರೋಧಿ ಕಾಂಗ್ರೆಸ್ಸಿಗರ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಜುಲೈ 4 ರಂದು ನಡೆಸಲು ನಿರ್ಧರಿಸಿರುವ ಅರಸು ಮತ್ತು ಅವರ ಸಹೋದ್ಯೋಗಿಗಳನ್ನು ಪೊಲಿಟ್‌ಬ್ಯೂರೊ ಸ್ವಾಗತಿಸುತ್ತದೆ.

ಜನತಾ ನೀತಿಗಳ ಬಗ್ಗೆ ಎದ್ದಿರುವ ಜನರ ಅಸಮಾಧಾನವನ್ನು ಉಪಯೋಗಿಸಿಕೊಂಡು ತಮ್ಮನ್ನು ಬಲಪಡಿಸಿಕೊಂಡು, ಹಳೆಯ ಕುಖ್ಯಾತ ದುಷ್ಟ ಆಳ್ವಿಕೆಯನ್ನೇ ವಾಪಸ್ಸು ತರಲು ಯೋಜಿಸುತ್ತಿದ್ದ ದುಷ್ಟರ ಯೋಜನೆಗಳಿಗೆ ಈ ಬೆಳವಣಿಗೆಗಳು ಭಾರಿ ಆಘಾತವನ್ನು ತಂದಿವೆ. ಎರಡೂ ಕಾಂಗ್ರೆಸ್ ಪಕ್ಷಗಳನ್ನು ವಿಲೀನಗೊಳಿಸಲು ಕಾಂಗ್ರೆಸ್ (ಐ) ಜೊತೆ ಸಂಬಂಧ ಸ್ಥಾಪಿಸಲು ಯತ್ನಿಸುತ್ತಿದ್ದ ಕಾಂಗ್ರೆಸ್ ನಾಯಕತ್ವದ ಒಂದು ಗುಂಪಿನ ಪ್ರಯತ್ನಗಳಿಗೂ ಭಾರಿ ಪೆಟ್ಟು ಬಿದ್ದಿದೆ.

ಜನತಾಪಕ್ಷದೊಳಗಿನ ಕೆಲವು ಗುಂಪುಗಳ ನಿರ್ಧಾರಗಳನ್ನು, ಅವರ ಮತ್ತು ಪಕ್ಷದ ಹೊರಗಿನ ಸರ್ವಾಧಿಕಾರ ವಿರೋಧಿ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳ ನಡುವಿನ ಕೆಲವು ಬೆಳವಣಿಗೆಗಳನ್ನು, ಪೊಲಿಟ್‌ಬ್ಯೂರೊ ಸ್ವಾಗತಿಸುತ್ತದೆ. ಜನತಾ ನಾಯಕತ್ವ ಅನುಸರಿಸುತ್ತಿರುವ ನೀತಿಗಳ ವಿಮರ್ಶೆ

ಜನತಾ ಸರ್ಕಾರದ ಅತ್ಯದ್ಭುತ ಸಾಧನೆ ಎಂದು ತುತ್ತೂರಿ ಊದಿಕೊಳ್ಳಲಾದ "ಬೆಲೆ ಸ್ಥಗಿತ" ಬರಿ ಖಾಲಿ ಮಾತಾಗಿ ಉಳಿದಿದೆ. ಬಜೆಟ್ಟಿನಲ್ಲಿ ವಿಧಿಸಿದ ಕರಗಳು ಬೆಲೆಗಳ ಮೇಲೆ ಶೇಕಡಾ ಒಂದಕ್ಕಿಂತ ಹೆಚ್ಚಿನ ಪ್ರಭಾವ ಬೀರಲಾರದೆಂದು ಸರ್ಕಾರಿ ವಕ್ತಾರರು ತಿಳಿಸಿದ್ದರೂ, ಸಂಸತ್ತಿನಲ್ಲಿ ಬಜೆಟ್ ಮಂಡಿಸಿದ ನಾಲ್ಕು ತಿಂಗಳಲ್ಲಿ ಶೇಕಡಾ ಹತ್ತರಷ್ಟು ಬೆಲೆಗಳು ಏರಿವೆ. 1973–74ರ ದಿನಗಳಲ್ಲಿ ಬಿಟ್ಟರೆ, ಹಿಂದೆಂದೂ ಇಷ್ಟು ಅಲ್ಪಾವಧಿಯಲ್ಲಿ ಬೆಲೆಗಳು ತೀವ್ರವಾಗಿ ಏರಿರಲಿಲ್ಲ.

ಸ್ಥಗಿತ ಆರ್ಥಿಕ ಪರಿಸ್ಥಿತಿಯಿಂದ ರೈತರು, ಸಣ್ಣ ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು ಮುಂತಾದವರೂ ಕಷ್ಟ ಅನುಭವಿಸುತ್ತಿದ್ದಾರೆ. ಅನೇಕ ಬೆಳೆಗಳ ಬೆಲೆಗಳು ತೀವ್ರವಾಗಿ ಇಳಿದಿರುವುದರಿಂದ ಕೃಷಿಕರು ತುಂಬ ಪೆಟ್ಟು ತಿಂದಿದ್ದಾರೆ. ಇತರ ಬೆಳೆಗಳ ಬೆಲೆಗಳು ಏರಿದ್ದರೂ, ಅವುಗಳ ಏರಿಕೆ ತಯಾರಿತ ವಸ್ತುಗಳ ಏರು ಬೆಲೆಗೆ ಸಮಾನವಾಗಿ ಇಲ್ಲ. ಸುಮಾರಾದ ಲಾಭಾಂಶವನ್ನಿಟ್ಟುಕೊಂಡು ಉದ್ಯಮವನ್ನು ನಡೆಸಲು ಸಣ್ಣ ವ್ಯಾಪಾರಿಗಳಿಗೆ, ಸಣ್ಣ ಕೈಗಾರಿಕೋದ್ಯಮಿಗಳಿಗೆ ಕಷ್ಟವಾಗುತ್ತಿದೆ. ಜನತೆಯ ಬಹುಸಂಖ್ಯಾತರ ಹಣೆಬರಹ ಹೀಗಿದ್ದರೆ, ಕೆಲವೇ ಮಂದಿ ದೊಡ್ಡ ಜಮೀನ್ದಾರರು, ಏಕಸ್ವಾಮ್ಯಗಾರರು,

ವನ್ನು ಹಿಂತೆಗೆದುಕೊಳ್ಳಲಾಯಿತು.

ಬೆಳೆಯುತ್ತಿರುವ ಮುಷ್ಕರ ಚಳುವಳಿಯು ಸಂಘಟಿತ ದುಡಿಯುವವರ್ಗ ಮತ್ತು ಮಧ್ಯಮವರ್ಗದ ನೌಕರರಿಗೆ ಮಾತ್ರ ಸೀಮಿತವಾಗಿಲ್ಲ. ಎಂಜಿನಿಯರ್‌ಗಳು, ವೈದ್ಯರು ಮುಂತಾದವರು ಕೂಡ ನೇರವಾಗಿ ಪ್ರತಿಕ್ರಿಯೆ ಸೂಚಿಸುವಂತೆ ಆಗುತ್ತಿದೆ. ಸರ್ಕಾರದ ನಾಗರಿಕ ನೌಕರರು ಮಾತ್ರ ಮುಷ್ಕರ ಮಾಡುತ್ತಿಲ್ಲ ಅದರ ದಬ್ಬಾಳಿಕೆ ಸಾಧನದ ಸಿಬ್ಬಂದಿಯೂ ಕೂಡ ದೇಶದಾದ್ಯಂತ ಪ್ರತಿಕ್ರಿಯೆ ವ್ಯಕ್ತಮಾಡುತ್ತಿದೆ. ಮೊದಲು ಪೋಲೀಸು ಸಿಬ್ಬಂದಿಯು ಆರಂಭಿಸಿದ ಮುಷ್ಕರವು ಅರೆಮಿಲಿಟರಿ ಪಡೆಗಳಾದ ಸಿ.ಆರ್.ಪಿ. ಮತ್ತು ಸಿ.ಐ.ಎಸ್.ಎಫ್.ಗಳಿಗೆ ಕೂಡ ಹಬ್ಬಿದೆ. ಪೋಲೀಸರ ವಿರುದ್ಧ ಸಿ.ಆರ್.ಪಿ. ಮತ್ತು ಇತರ ಅರೆಮಿಲಿಟರಿ ಪಡೆಗಳನ್ನು ಬಳಸಿದ್ದು ಮತ್ತು ಅರೆಮಿಲಿಟರಿ ಪಡೆಗಳ ವಿರುದ್ಧ ಸೈನ್ಯವನ್ನು ಬಳಸಿದ್ದು, ಇವೆಲ್ಲವೂ ಆಡಳಿತ ಯಂತ್ರವು ಎಂಥ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂಬುದನ್ನು ತೋರಿಸುತ್ತದೆ.

ಸ್ವಾತಂತ್ರ್ಯ ಬಂದನಂತರ ಹಿಂದೆಂದೂ ಸರ್ಕಾರದ ಶಾಂತಿ ಮತ್ತು ಕಾನೂನು ಸಿಬ್ಬಂದಿಯಲ್ಲಿ ಹಾಗೆ ಘರ್ಷಣೆ ಎದ್ದಿರಲಿಲ್ಲ. ಬಿಕ್ಕಟ್ಟಿನಿಂದ ಅನುಭವಿಸಿದ ಕಷ್ಟಗಳು ತುಟ್ಟತುದಿಯನ್ನು ಮುಟ್ಟಿದಂತೆ ಕಾಣುತ್ತದೆ.

ಹೇಳಿಕೆಗಳು, ಜನತಾ ಪಕ್ಷ ಯಾವ ಘೋಷಿತ ನೀತಿಗಳ ಆಧಾರದ ಮೇಲೆ ಅಧಿಕಾರಕ್ಕೆ ಬಂತೋ ಅದಕ್ಕೆ ತೀರ ವಿರುದ್ಧವಾಗಿವೆ. ಪ್ರಜಾಸತ್ತಾತ್ಮಕ ಶಕ್ತಿಗಳು ತಮ್ಮ ಐಕ್ಯಕಾರ್ಯಾಚರಣೆಯಿಂದ ಸರ್ಕಾರದ ಈ ಹೆಜ್ಜೆಗಳನ್ನು ಹಿಮ್ಮೆಟ್ಟಿಸದಿದ್ದರೆ ಅಧಿಕಾರಶಾಹಿಯು ತನ್ನ ತಲೆಯನ್ನು ಮತ್ತೆ ಎತ್ತುವ ಅಪಾಯವು ಸತ್ಯವಾಗಿದೆ.

ಜನತಾಪಕ್ಷದ ಕೆಲವು ಸಚಿವರು ಕಾರ್ಮಿಕವರ್ಗವನ್ನು ಹೀಗಳೆದು ಅವರು ದೇಶವನ್ನು ಪಣವಾಗಿಟ್ಟು ಲಾಭಮಾಡಿಕೊಳ್ಳುತ್ತಾರೆಂದು ಹೇಳಿರುವುದನ್ನು ಪೊಲಿಟ್‌ಬ್ಯೂರೊ ತೀವ್ರವಾಗಿ ಖಂಡಿಸುತ್ತದೆ. ಕಾರ್ಮಿಕ ವರ್ಗದ ನೈಜವೇತನ ಏನೂ ಏರಿಲ್ಲವೆಂಬುದನ್ನು ಯೋಜನಾ ಆಯೋಗದ ಅಂಕಿಸಂಖ್ಯೆಗಳೇ ತೋರಿಸುತ್ತವೆ. ಕೃಷಿ ಕಾರ್ಮಿಕರ ಹಿತೈಷಿಗಳೆಂದು ತೋರಿಸಿಕೊಂಡು ಕೈಗಾರಿಕಾ ಕಾರ್ಮಿಕರನ್ನು ಹೀಗಳೆಯುವುದು ಜನತಾ ಮಂತ್ರಿಗಳ ವಂಚನೆಯ ಬುದ್ಧಿಯನ್ನು ತೋರಿಸುತ್ತದೆ. ಈಗ ಜನತಾ ಆಡಳಿತದಲ್ಲಿ ಆದಹಾಗೆ, ಹರಿಜನರೆಂದು ಕರೆಸಿಕೊಳ್ಳುವ ಕೃಷಿಕಾರ್ಮಿಕರ ವಧೆ ಹಿಂದೆ ಯಾವ ಆಡಳಿತದಲ್ಲೂ ಆಗಿರಲಿಲ್ಲ.

ಜನತಾ ಸಚಿವರ ಈ ಸುಳ್ಳು ಮತ್ತು ಕುತ್ಸಿತ ಆಕ್ರಮಣಗಳು ಕಾರ್ಮಿಕ

ಅನುಸರಿಸಿ, ಸ್ಥಳೀಯ ಜನತಾಪಕ್ಷದ ದುಷ್ಟ ಮನೋಭಾವವನ್ನು ಹತ್ತಿಕ್ಕಿದರೆ ಮಾತ್ರ, ಈಶಾನ್ಯ ಪ್ರದೇಶದ ಗಿರಿಜನರ ವಿಶ್ವಾಸ ಸಂಪಾದಿಸಬಹುದು ಎಂದು ಪೊಲಿಟ್‌ಬ್ಯೂರೊ ಅಭಿಪ್ರಾಯ ಪಡುತ್ತದೆ.

ಈ ಪ್ರದೇಶದ ರಾಷ್ಟ್ರೀಯ ಘರ್ಷಣೆಗಳನ್ನು ಉಪಯೋಗಿಸಿಕೊಳ್ಳಲು, ಭಾರತ ಐಕ್ಯತೆ ಮತ್ತು ದೃಢತೆಯನ್ನು ಕೆಡಿಸಲು, ಗಿರಿಜನರು ಮತ್ತು ಭಾರತದ ಇತರ ಜನರ ಸಂಬಂಧವನ್ನು ತಪ್ಪಿಸಲು ಸಾಮ್ರಾಜ್ಯಶಾಹಿಯು ಯತ್ನಿಸುತ್ತಿರುವುದರಿಂದ ಈ ಪ್ರದೇಶದ ಪರಿಸ್ಥಿತಿಯು ತುಂಬ ಗಂಭೀರವಾಗಿದೆ.

ವಾಮರಂಗದ ಹೆಮ್ಮೆಯ ಸಾಧನೆ :

ತ್ರಿಪುರಾ ಮತ್ತು ಪಶ್ಚಿಮ ಬಂಗಾಳಗಳ ವಾಮರಂಗ ಸರ್ಕಾರಗಳೆರಡೂ ಜನಪ್ರಿಯತೆಯನ್ನು ಗಳಿಸಿಕೊಳ್ಳುವ ಪ್ರಜಾಸತ್ತಾತ್ಮಕ ನೀತಿಗಳನ್ನೇ ಅನುಸರಿಸುತ್ತಿವೆ ಎಂಬುದನ್ನು ಪೊಲಿಟ್‌ಬ್ಯೂರೊ ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತದೆ. ವಾಮರಂಗದ ಎರಡು ವರ್ಷಗಳ ಅವಧಿಯಲ್ಲಿ ಮೂರು ಬಾರಿ ಪ್ರವಾಹಗಳು, ನಿರಂತರ ವಿದ್ಯುತ್ ಕೊರತೆ ಮುಂತಾದ ಅನೇಕ ಕಷ್ಟಗಳನ್ನು ಸಹಿಸಿಕೊಂಡು, ಇವನ್ನು ಪರಿಹರಿಸಲು ವಾಮರಂಗ ಸರ್ಕಾರವು ಗರಿಷ್ಠ ಪ್ರಯತ್ನಗಳನ್ನು ಮಾಡುತ್ತಿದೆ ಎಂಬುದನ್ನು ಅರಿತುಕೊಂಡು ಅದಕ್ಕೆ ಬೆಂಬಲ ನೀಡುತ್ತಿರುವ ಪ. ಬಂಗಾಳದ ಜನತೆಗೆ ಪೊಲಿಟ್‌ಬ್ಯೂರೊ ಧನ್ಯವಾದಗಳನ್ನು ಅರ್ಪಿಸುತ್ತದೆ. ಇದಕ್ಕೆ ಬದಲಾಗಿ ಕಾಂಗ್ರೆಸ್ ಪಕ್ಷಗಳು, ಜನತಾ ಇವುಗಳು ಆನಂದಮಾರ್ಗ, ಆರೆಸ್ಸೆಸ್‌ನಿಂದ ಸಂಪೂರ್ಣಬೆಂಬಲ ಪಡೆದು, ವಾಮರಂಗ ಸರ್ಕಾರವನ್ನು ದೂಷಿಸುತ್ತಿವೆ. ಆನಂದಮಾರ್ಗದ ಆಶ್ರಯದಲ್ಲಿ ಆರಂಭವಾಗಿ ವಿದೇಶದಿಂದಲೂ ನೆರವು ಪಡೆಯುತ್ತಿರುವ ಅಮ್ರಬಂಗಾಲಿ ಚಳುವಳಿ ಪಶ್ಚಿಮ ಬಂಗಾಳ ಮತ್ತು ತ್ರಿಪುರಾಗಳೆರಡರಲ್ಲೂ ಹೆಚ್ಚು ಚಟುವಟಿಕೆ ನಡೆಸುತ್ತಿದೆ. ಇಡೀ ಪ್ರದೇಶದ ಬಂಗಲಿಗಳಲ್ಲದ ಬುಡಕಟ್ಟಿನ ಬಗ್ಗೆ ಬಂಗಾಲಿಗಳ ಮತಾಂಧ ಭಾವನೆಗಳನ್ನು ಎಬ್ಬಿಸುವುದು ಇವರ ಘೋಷಿತ ಉದೇಶವಾಗಿದೆ. ಎರಡು ರಾಜ್ಯಗಳ ವಾಮರಂಗ ಸರ್ಕಾರದ ವಿರುದ್ಧ ಇದನ್ನು ಉದ್ದೇಶಿಸಲಾಗಿದ್ದರೂ ಇಡೀ ದೇಶದ ಶಾಂತಿ ಐಕ್ಯತೆಗಳಿಗೆ ಇದು ಮಾರಕವಾಗುತ್ತದೆ. ಏಕೆಂದರೆ ಈ ಸಂಸ್ಥೆಯು ಇಡೀ ಪ್ರದೇಶವನ್ನು ಬುಡಕಟ್ಟುಗಳ ನಡುವಿನ ಮತ್ತು ಬುಡಕಟ್ಟು-ಬುಡಕಟ್ಟು ಅಲ್ಲದವರ ನಡುವಿನ ಘರ್ಷಣಾ ಕೇಂದ್ರವನ್ನಾಗಿ ಮಾಡುತ್ತದೆ.

ತಮ್ಮನ್ನು ತಾವು "ರಾಷ್ಟ್ರೀಯ" ಎಂದು ಕರೆದುಕೊಳ್ಳುವ ಮತ್ತು ಭಾರತ ಐಕ್ಯತೆ ಮತ್ತು ದೃಢತೆಗಾಗಿ ನಿಲ್ಲುತ್ತೇವೆ ಎಂದು ಹೇಳಿಕೊಳ್ಳುವ ಪಕ್ಷಗಳು, ತಮಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಇರುವ ವಿರೋಧಿ ಪೂರ್ವಾಗ್ರಹದಿಂದ ಅದೆಷ್ಟು ಕುರುಡರಾಗಿದ್ದಾವೆಂದರೆ, ಇತ್ತೀಚೆಗೆ ಕಲ್ಕತ್ತದಲ್ಲಿ ಮಾನವ ಬುರುಡೆಗಳ ಪ್ರದರ್ಶನ ನಡೆಸಿ, ತೀವ್ರ ಉತ್ತೇಜಕ ಘೋಷಣೆಗಳನ್ನು ಕೂಗಿದ ಅಮ್ರಬಂಗಾಲಿ ಚಳುವಳಿಯಂಥ ಮತಾಂಧ ಸಂಸ್ಥೆಯನ್ನೂ ಯಾವ ಹಿಂಜರಿಕೆಯೂ ಇಲ್ಲದೆ ಬೆಂಬಲಿಸುವುದು ಪೊಲಿಟ್‌ಬ್ಯೂರೊಗೆ ಆಶ್ಚರ್ಯವನ್ನುಂಟು ಮಾಡುತ್ತದೆ.

ಹಿಂದು ಮತೀಯವಾದದ ಹಿಡಿತ :

ಹೀಗೆ ನಡೆದಿರುವುದು ಇದೊಂದೇ ಘಟನೆ ಅಲ್ಲ. ಸರ್ಕಾರದಲ್ಲಿ ಮೊದಲಿನ ಜನಸಂಘದ ನಾಯಕರು ಭಾಗವಹಿಸಿರುವುದರಿಂದ ಆರೆಸ್ಸೆಸ್‌ಗೆ ದೇಶದಾದ್ಯಂತ ಸಿಕ್ಕ ಪ್ರೋತ್ಸಾಹ, ಅಫ್ಘಾನಿಸ್ತಾನದಿಂದ ಇಂಡೋನೇಷ್ಯದವರೆಗೂ ಹಬ್ಬಿದ್ದ ಹಿಂದೂಸಾಮ್ರಾಜ್ಯ ಪುನರುತ್ಥಾನಕ್ಕೆ ಹೋರಾಡುತ್ತೇವೆಂದು ಇತ್ತೀಚೆಗೆ ಕೆಲವು ಆರೆಸ್ಸೆಸ್ ನಾಯಕರು ಇತ್ತ ಹೇಳಿಕೆಗಳು, ಇವೆಲ್ಲವೂ ಆಡಳಿತ ಮತ್ತು ಆಡಳಿತ ಪಕ್ಷದ ನಾಯಕತ್ವದ ಮೇಲೆ ಹಿಂದೂ ಮತೀಯವಾದಕ್ಕೆ ಇರುವ ಹಿಡಿತವನ್ನು ಸೂಚಿಸುತ್ತವೆ. ದೇಶದ ಆಡಳಿತದಲ್ಲಿ ಜನಸಂಘದ ನಾಯಕರು ಪಾತ್ರವಹಿಸಿದರೆ ಆರೆಸ್ಸೆಸ್‌ನ ಚಟುವಟಿಕೆಗಳನ್ನು ನಿಯಂತ್ರಿಸಿದಂತಾಗುತ್ತದೆ ಎಂದು ಜನತಾಪಕ್ಷ ಮತ್ತು ಅವರ ಹೊರಗಿನ ಮಿತ್ರರಿಗೆ ಇದ್ದ ಭ್ರಮೆಯು ಈಗ ಟೊಳ್ಳಾಗಿದೆ. ಹಾಗೆ ನೋಡಿದರೆ ಆರೆಸ್ಸೆಸ್‌ನ ಶಾಖೆಗಳು ಮತ್ತು ಅವರ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಚಟುವಟಿಕೆಗಳು, ಅಲ್ಪಸಂಖ್ಯಾತರು ಮತ್ತು ಸಮಾಜದ ಇತರ ದುರ್ಬಲವರ್ಗದವರನ್ನು ಜನತಾಪಕ್ಷದಿಂದ ದೂರಮಾಡುತ್ತಿವೆ. ಆದ್ದರಿಂದಲೇ ಆರೆಸ್ಸೆಸ್ ಕಾರ್ಯಕರ್ತರೂ ಆಗಿರುವ ಜನತಾ ನಾಯಕರ ಎರಡು ಸದಸ್ಯತ್ವಗಳು ಕೊನೆಗೊಳ್ಳಬೇಕೆಂಬ ಒತ್ತಾಯದ ಬೇಡಿಕೆ ಹೆಚ್ಚುತ್ತಿದೆ.

ಹೆಚ್ಚಾಗುತ್ತಿರುವ ಕೋಮು ಕಲಹಗಳೇ ಮುಂತಾದ ವಿಚಾರಗಳು ದುಷ್ಟ ಶಕ್ತಿಗಳು ಬಲಗೊಂಡು, ಇದನ್ನು ಜನತಾಪಕ್ಷದ ಒಂದಲ್ಲ ಒಂದು ಗುಂಪು ಮತ್ತು ಎರಡು ಕಾಂಗ್ರೆಸ್‌ಗಳು ಉಪಯೋಗಿಸಿಕೊಳ್ಳುತ್ತಿವೆ. ಜನತೆಯನ್ನು "ಹಿಂದುಳಿದವರು" ಮತ್ತು "ಮುಂದುವರೆದವರು" ಎಂದು ವಿಭಾಗಿಸುವುದರಿಂದ, ಎಲ್ಲ ಪ್ರಜಾಸತ್ತಾತ್ಮಕ ಚಳುವಳಿಗಳಿಗೆ ಅದರಲ್ಲೂ ಕಾರ್ಮಿಕರ ಮತ್ತು ರೈತರ ಚಳುವಳಿಗೆ ಅಪಾಯ ತಲೆದೋರುತ್ತಿದೆ. ಆಡಳಿತ ನಡೆಸುತ್ತಿರುವ ಮತ್ತು ಆಳುವವರ್ಗಗಳ ವಿರೋಧ ಪಕ್ಷಗಳ ನಾಯಕರ ತಮ್ಮ ಪರಸ್ಪರ ಕಚ್ಚಾಟಗಳಿಗೆ ಈ ಕೋಮು ಕಲಹಗಳನ್ನು ಬಳಸಿಕೊಳ್ಳುತ್ತಿದ್ದಾರೆ.

ಅಲಿಘರ್, ಜೆಮ್‌ಷೆಡ್‌ಪುರಗಳಲ್ಲಿ ಇತ್ತೀಚೆಗೆ ನಡೆದ ಕೋಮು ಕಲಹಗಳು ತುಂಬ ಅಪಾಯವನ್ನು ಒಡ್ಡುತ್ತಿವೆ. ಇದರ ಬಗ್ಗೆ ಪ್ರತಿ ಜಾತ್ಯತೀತ ಪ್ರಜಾಪ್ರಭುತ್ವವಾದಿ ಪಕ್ಷ, ಸಂಸ್ಥೆ, ವ್ಯಕ್ತಿಗಳೂ ಎಚ್ಚೆತ್ತುಕೊಳ್ಳುವರೆಂದು ಪೊಲಿಟ್‌ಬ್ಯೂರೊ ಆಶಿಸುತ್ತದೆ. ರಾಜ್ಯದ ವಿದ್ಯುತ್ ಕೊರತೆ, ಮಾರಿಚ್‌ಜಪ್ಹಾನಿಯಲ್ಲಿ ದಂಡಕಾರಣ್ಯ ನಿರಾಶ್ರಿತರು ಇತ್ಯಾದಿ ಸಮಸ್ಯೆಗಳನ್ನು ಉಪಯೋಗಿಸಿಕೊಂಡು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅಸಮರ್ಥರಾದ ಪ. ಬಂಗಾಳದ ವಾಮರಂಗ ವಿರೋಧಿ ಶಕ್ತಿಗಳು, ಕೊನೆಗೆ ಕೋಮುಕಲಹಗಳಿಂದ ದೂರವಾಗಿದೆ ಎಂದು ಹೆಸರಾಗಿದ್ದ ನಾಡಿಯಾ ಜಿಲ್ಲೆಯಲ್ಲಿ ಕೋಮು ಭಾವನೆಗಳನ್ನು ಎಬ್ಬಿಸುವ ಪಿತೂರಿ ಮಾಡಿದ್ದಾರೆ. ಇದರಿಂದ ನಡೆದ ಕಲಹಗಳಿಗೆ ಕಾಂಗ್ರೆಸ್ (ಐ) ಕಾಂಗ್ರೆಸ್ ಮತ್ತು ಜನತಾಗಳೇ ಕಾರಣ.

ಕಮ್ಯುನಿಸ್ಟ್ ಪಕ್ಷದ ಪಾತ್ರ:

ಪ. ಬಂಗಾಳ ಮತ್ತು ತ್ರಿಪುರಾಗಳಲ್ಲಿ ಅಸ್ಥಿರತೆಯನ್ನು ಉಂಟುಮಾಡಲು ಪ್ರತಿಗಾಮಿ ಪಕ್ಷಗಳು ಮತ್ತು ಸಂಸ್ಥೆಗಳು ವಾಮರಂಗ ವಿರೋಧಿ ಚಳುವಳಿಯನ್ನು ಆರಂಭಿಸಿರುವುದು ಗೊತ್ತಿರುವ ವಿಚಾರ. ಇದನ್ನು ಮನಗಾಣದೆ ಮತ್ತು ಪ್ರತಿಗಾಮಿ ಶಕ್ತಿಗಳ ದುಷ್ಟ ಚಟುವಟಿಕೆಗಳ ವಿರುದ್ಧ ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸದೆ, ಕಮ್ಯುನಿಸ್ಟ್ ಪಕ್ಷದ ನಾಯಕರು ಇಂಥ ವಾಮರಂಗ ಸರ್ಕಾರ ವಿರೋಧಿ ಚಟುವಟಿಕೆಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ಈ ಪ್ರತಿಗಾಮಿ ಶಕ್ತಿಗಳಿಂದ ತಾವು ಭಿನ್ನ ಎಂದು ಹೊರಗೆ ತೋರಿಸಿಕೊಳ್ಳುತ್ತಲೇ ವಾಮರಂಗ ಸರ್ಕಾರಗಳ ವಿರುದ್ಧ ತಮ್ಮದೇ ಪ್ರಚಾರಗಳನ್ನು ಆರಂಭಿಸಿದ್ದಾರೆ. 1967-69ರ ಪ. ಬಂಗಾಳ ಮತ್ತು ಕೇರಳ ಸರ್ಕಾರಗಳ ವಿರುದ್ಧ ಕಾಂಗ್ರೆಸ್ (ಐ) ಜೊತೆ ಅವರು ಸೇರಿ ನಡೆಸಿದ್ದ ದುಷ್ಟದಾಳಿಗಳನ್ನು ಇದು ನೆನಪಿಗೆ ತರುತ್ತದೆ. ಅವರು ಇಂದಿರಾ ಕಾಂಗ್ರೆಸ್ ಜೊತೆ ಮಾಡಿಕೊಂಡಿದ್ದ "ಐಕ್ಯತೆ" ಎರಡು ಸರ್ಕಾರಗಳನ್ನು ಮುಗಿಸಿತು. ಇಂದು ಕೂಡ, ಪ. ಬಂಗಾಳ ಮತ್ತು ತ್ರಿಪುರಾಗಳ ಸರ್ಕಾರದ ವಿರುದ್ಧ ಅಂಥದೇ ಪ್ರಚಾರ ಆರಂಭಿಸಿ, ಮಾರ್ಕ್ಸ್‌ವಾದಿ ಪಕ್ಷ ವಿರೋಧಿ ಐಕ್ಯತೆಯನ್ನು ಕಾಪಾಡಲು ಮತ್ತು ಅದರ ಆಧಾರದ ಮೇಲೆ ರಚಿಸಲ್ಪಟ್ಟ ಕೇರಳ ಸರ್ಕಾರವನ್ನು ಕಾಪಾಡಲು ಅವರು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಇದು, ಅವರ ಘೋಷಿತ ಗುರಿಯಾದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯ ಜೊತೆಗೆ ಹೊಂದುತ್ತದೆಯೇ ಎಂಬುದರ ಬಗ್ಗೆ ಆಲೋಚಿಸಬೇಕೆಂದು ಕಮ್ಯುನಿಸ್ಟ್ ಪಕ್ಷದ ಅನುಯಾಯಿಗಳು, ಸದಸ್ಯರು ಮತ್ತು ನಾಯಕರಿಗೆ ಪೊಲಿಟ್‌ಬ್ಯೂರೊ ಮನವಿ ಮಾಡುತ್ತದೆ.

ಸ್ವಾಗತಾರ್ಹ ಬೆಳವಣಿಗೆಗಳು :

ಪ. ಬಂಗಾಳ ಮತ್ತು ತ್ರಿಪುರಾಗಳ ವಾಮರಂಗ ಸರ್ಕಾರಗಳ ಬಗ್ಗೆ ಕಮ್ಯುನಿಸ್ಟ್ ಪಕ್ಷ ಇಂಥ ಧೋರಣೆ ತೋರಿಸುತ್ತಿದ್ದರೂ, ಪರಿಸ್ಥಿತಿಯಲ್ಲಿ ಅನೇಕ ನೇತ್ಯಾತ್ಮಕ ಲಕ್ಷಣಗಳು ಇದ್ದರೂ, ದೇಶದ ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳ ನಡುವೆ ಒಂದು ವಿಶಾಲಮನೋಭಾವ ಬೆಳೆಯುತ್ತಿರುವುದರ ಬಗ್ಗೆ ಪೊಲಿಟ್‌ಬ್ಯೂರೊ ಸಂತಸಪಡುತ್ತದೆ. ಸರ್ವಾಧಿಕಾರ ವಿರೋಧಿ ಕಾಂಗ್ರೆಸ್ಸಿಗರ ಬೆಂಗಳೂರು ಅಧಿವೇಶನ, ತಮ್ಮ ನಾಯಕರು ಅನುಸರಿಸುತ್ತಿರುವ ನೀತಿಗಳ ಬಗ್ಗೆ ಜನತಾ ಪಕ್ಷದ ಅನೇಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು, ಮಧುಲಿಮಯೆ ಮತ್ತು ಜಾರ್ಜ್‌ಫರ್ನಾಂಡಿಸ್‌ರಂಥ ಸಮಾಜವಾದಿ ನಾಯಕರು, ಜನತಾದ ಶಕ್ತಿಗಳ ಮರುಹೊಂದಾಣಿಕೆಗೆ ಮತ್ತು ಹೊರಗಿನ ಪ್ರಜಾಸತ್ತಾತ್ಮಕ, ಜಾತ್ಯತೀತ ಶಕ್ತಿಗಳ ಜೊತೆ ಸಂಬಂಧ ಸ್ಥಾಪಿಸಿಕೊಳ್ಳುವುದಕ್ಕೆ ತೋರಿರುವ ಆಸಕ್ತಿ- ಇವೆಲ್ಲವೂ ಸ್ವಾಗತಾರ್ಹ ಬೆಳವಣಿಗೆಗಳು. ಸರ್ವಾಧಿಕಾರ ಮತ್ತು ಕೋಮುವಾದವನ್ನು ವಿರೋಧಿಸುವ ಹೋರಾಟದಲ್ಲಿ ಆಸಕ್ತಿ ಇರುವವರೆಲ್ಲರ ಒಂದು ವೇದಿಕೆಯನ್ನು ರಚಿಸಲು ಯಾವ ಅವಕಾಶವನ್ನೂ ಬಿಡಬಾರದೆಂದು ಎಲ್ಲ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳಿಗೆ ಪೊಲಿಟ್‌ಬ್ಯೂರೊ ಮನವಿ ಮಾಡುತ್ತದೆ.

ಕಾರ್ಮಿಕವರ್ಗದ ಮೇಲಿನ ಯೋಜಿತ ದಾಳಿ, ಸೂಚಿಸಿರುವ ಸ್ಥಾನಬದ್ಧತಾ ಕಾಯಿದೆ, ಕೋಮುಕಲಹಗಳು, ಹರಿಜನರ ಬೇಟೆ, ಸ್ಥಳೀಯ ಮತ್ತು ಮತಾಂಧ ಮನವಿಗಳ ಮೂಲಕ ಭಾವನೆಗಳನ್ನು ಎಬ್ಬಿಸುವುದು ಇವುಗಳನ್ನೆಲ್ಲ ಹತ್ತಿಕ್ಕದಿದ್ದರೆ, ಪ್ರಜಾಸತ್ತಾತ್ಮಕ ಶಕ್ತಿಗಳ ಕೈಯಿಂದ ಅಧಿಕಾರ ತಪ್ಪಿಹೋಗಿ, ಸರ್ವಾಧಿಕಾರಿ ಶಕ್ತಿಗಳು ಅನುಕೂಲ ಸ್ಥಾನವನ್ನು ಪಡೆಯುತ್ತವೆ. ಅಧಿಕಾರವು ಪ್ರಜಾಸತ್ತಾತ್ಮಕ, ಜಾತ್ಯತೀತ ಮತ್ತು ವಾಮಶಕ್ತಿಗಳ ಕೈಗೆಬರುತ್ತದೆ ಎಂಬ ಭಯದಿಂದ ಪ್ರತಿಗಾಮಿ ಪಕ್ಷಗಳು ಈ ಎಲ್ಲ ದೌರ್ಬಲ್ಯಗಳು ಮತ್ತು ಕ್ರಮಗಳನ್ನು ಅನುಸರಿಸುತ್ತಿವೆ. ●

ಪ. ಬಂಗಾಳದಲ್ಲಿ ಸಿ.ಪಿ.ಐ. (ಎಂ) ವಿರೋಧಿ ಚಟುವಟಿಕೆಯ ಹಿನ್ನೆಲೆಯಲ್ಲಿ ಸಿ.ಪಿ.ಐ.

—ಇ.ಎಂ.ಎಸ್. ನಂಬೂದಿರಿಪಾದ್

ಬಲಕಮ್ಯುನಿಸ್ಟರ ನ್ಯೂಏಜ್ ಪತ್ರಿಕೆಯ ಜೂನ್ 17 ಮತ್ತು 24ರ ಸಂಚಿಕೆಗಳನ್ನು ಓದಿದಾಗ. 1967-69ರ ವರುಷಗಳು ನೆನಪಿಗೆ ಬರುತ್ತವೆ. ಆಗಿನ ಪ. ಬಂಗಾಳದ ಸರ್ಕಾರದಲ್ಲಿ ತಾನೇ ಸಹಭಾಗಿಯಾಗಿದ್ದರೂ ಸಹ, ಕಮ್ಯುನಿಸ್ಟ್ ಪಕ್ಷ ಇತರ ರಾಜಕೀಯ ಪಕ್ಷಗಳೊಂದಿಗೆ ಸೇರಿಕೊಂಡು ಸರ್ಕಾರದ ವಿರುದ್ಧ ಉನ್ಮತ್ತ ಪ್ರಚಾರ ನಡೆಸುತ್ತಿತ್ತು.

ಆಗ ನಡೆದ ಪ್ರಚಾರದಲ್ಲಿ, ಬಂಗ್ಲಾ ಕಾಂಗ್ರೆಸ್-ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್-ಕಮ್ಯುನಿಸ್ಟ್ ಪಕ್ಷ, ಹೀಗೆ ಸೇರಿಕೊಂಡು ಪಿತೂರಿ ನಡೆಸಿ, ಮಾರ್ಕ್ಸ್‌ವಾದಿ ಪಕ್ಷದ ವಿರುದ್ಧ ಕಾಂಗ್ರೆಸ್‌ನ ಜೊತೆ ಬಲವಾದ ರಾಜಕೀಯ ಮೈತ್ರಿ ಬೆಳೆಸಿ, ಸರ್ಕಾರವನ್ನು ಉರುಳಿಸುವ ಯೋಜನೆ ಇತ್ತು. ಆ ಮೈತ್ರಿಯ ಕಾರಣದಿಂದಲೇ ಪ. ಬಂಗಾಳದಲ್ಲಿ ನಂತರ ಅರೆಫ್ಯಾಸಿಸ್ಟ್ ಭೀಕರ ಆಡಳಿತ ಸ್ಥಾಪನೆಯಾಯಿತು.

ಪಶ್ಚಿಮ ಬಂಗಾಳದಲ್ಲಿ ಯಾರ ಜೊತೆ ?

ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್ಸಿನ ಜೊತೆ ಸಹವರ್ತಿಯಾಗಿದ್ದ ದುರಂತ ಅನುಭವದಿಂದ, ದೇಶದ ಇತರ ಪಕ್ಷಗಳು ಮತ್ತು ಸಂಘಟನೆಗಳ ಹಾಗೆ ಕಮ್ಯುನಿಸ್ಟ್ ಪಕ್ಷವೂ ಪಾಠ ಕಲಿತಿದೆ ಎಂದು ಯೋಚಿಸಲಾಗಿತ್ತು. ತುರ್ತುಪರಿಸ್ಥಿತಿ ಆಡಳಿತಕ್ಕೆ ಬೆಂಬಲ ಕೊಟ್ಟಿದ್ದು ತಪ್ಪಾಯಿತು ಎಂದು ಅದರ ನಾಯಕರು ಸಾರ್ವಜನಿಕ ಹೇಳಿಕೆ ಕೊಡುವಂತಾಗಿತ್ತು. ಈಗ ಇಂದಿರಾ ಕಾಂಗ್ರೆಸ್ ಮತ್ತು ಜನತಾಗಳಿಗಿಂತ ಬೇರೆಯಾದ ಒಂದು ರಾಷ್ಟ್ರೀಯ ಪರ್ಯಾಯವನ್ನು ಸೃಷ್ಟಿಸುವ ಆಸೆ ತಮಗಿದೆಯೆಂದು ಅವರು ಹೇಳುತ್ತಿದ್ದಾರೆ. ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗವನ್ನು ಕಟ್ಟುವುದು ಈ ಕ್ಷಣವೇ ಸಾಧ್ಯ ಎಂಬ ಅವರ ಹೇಳಿಕೆಗೆ ಮಾರ್ಕ್ಸ್‌ವಾದಿ ಪಕ್ಷ ಬೆಂಬಲ ಕೊಡುತ್ತಿಲ್ಲ ಎಂದು ಅವರು ದೂರುತ್ತಿದ್ದಾರೆ.

ಪಶ್ಚಿಮ ಬಂಗಾಳದಲ್ಲಾದರೂ ಅಲ್ಲಿನ ಎಡರಂಗ ಸರ್ಕಾರವನ್ನು ಉರುಳಿಸಲು ಭಗೀರಥ ಪ್ರಯತ್ನ ಮಾಡುತ್ತಿರುವವರ ಜೊತೆ ತಾವಿದ್ದೇವೆಂಬುದನ್ನು ಅವರು ಜೂನ್ 17ರ ನ್ಯೂಏಜ್‌ನ ಸಂಪಾದಕೀಯದಿಂದ ಸ್ಪಷ್ಟಪಡಿಸಿದ್ದಾರೆ. "ಜನತಾ ಪಕ್ಷ ಮತ್ತು ಎರಡು ಕಾಂಗ್ರೆಸ್‌ಗಳ ಜೊತೆಗೆ ಮಿಕ್ಕ ವಾಮವಿರೋಧಿ ಪ್ರತಿಗಾಮಿ ಅಂಶಗಳಿಂದ" ಕಮ್ಯುನಿಸ್ಟ್ ಪಕ್ಷವನ್ನು ಬೇರ್ಪಡಿಸಿಕೊಳ್ಳುತ್ತಾ ಸಂಪಾದಕೀಯದಲ್ಲಿ ಹೀಗೆ ಹೇಳುತ್ತಾರೆ;

"ಆದರೆ ಅವರು ಮಾಡಿರುವ ಅಪಾದನೆಯೆಲ್ಲವೂ ಹುರುಳಿಲ್ಲದೆ ಇಲ್ಲ. ಅಲ್ಲದೆ, ರಾಜ್ಯ ಸರ್ಕಾರದ ವಿರುದ್ಧ ನಡೆದ ಪ್ರತಿಭಟನಾ ಪ್ರದರ್ಶನಗಳು ಮತ್ತಿತರ ಚಟುವಟಿಕೆಗಳಲ್ಲಿ ಇದ್ದವರು ಎಂಬಷ್ಟಕ್ಕೆ ಅನೇಕ ಕಾಂಗ್ರೆಸ್ಸಿಗರನ್ನು ಪ್ರತಿಗಾಮಿಗಳು ಎಂದು ಕರೆಯಲಾಗುವುದಿಲ್ಲ."

"ವಾಮರಂಗ ಸರ್ಕಾರದ ಎರಡು ವರ್ಷಗಳನ್ನು" ಪರಿಶೀಲಿಸುವ ಲೇಖನವೊಂದು ಜೂನ್ 24ರ ನ್ಯೂಏಜ್

[6ನೇ ಪುಟ ನೋಡಿ]

ಮುಳುಬಾಗಿಲು ತಾಲ್ಲೂಕು ರೈತಸಂಘದ ಬಹಿರಂಗ ಸಭೆ

ಜುಲೈ 10ರಂದು ಕೋಲಾರ ಜಿಲ್ಲೆಯ ಮುಳುಬಾಗಿಲಿನಲ್ಲಿ ರೈತ ಸಂಘದ ಸಭೆಯು ಕಾಂ. ಆರ್. ವೆಂಕಟರಾಮಯ್ಯನವರ ಮುಖಂಡತ್ವದಲ್ಲಿ ಜರುಗಿತು. ಸಭೆಯ ಪ್ರಾರಂಭದಲ್ಲಿ ಬಡಜನಗಳ ಸಂಕಟವನ್ನು ಪ್ರತಿಬಿಂಬಿಸುವ ಕ್ರಾಂತಿಕಾರಿ ಗೀತೆಗಳನ್ನು ಕೋಲಾರ ದಲಿತ ಸಂಘರ್ಷ ಸಮಿತಿಯವರು ಹಾಡಿದರು. ರೆಗ್ಯುಲೇಟೆಡ್ ಮಾರ್ಕೆಟ್ ಅಧ್ಯಕ್ಷರಾದ ಕಾಂ. ನಾಗಿರೆಡ್ಡಿಯವರು ರೈತರ ಪ್ರಸ್ತುತ ಸಮಸ್ಯೆಗಳ ಬಗ್ಗೆ ವಿವರಿಸಿದರು. ಮನೆ ಕಂದಾಯ 1ಕ್ಕೆ ಮೂರರಷ್ಟು ಹೆಚ್ಚಿಸಿರುವುದು, ಡಿ.ಸಿ.ಸಿ. ಬ್ಯಾಂಕ್‌ನವರ ದೌರ್ಜನ್ಯ, ನಗರ ನೈರ್ಮಲ್ಯದ ಕಡೆ ಪುರಸಭೆಯವರ ಅಲಕ್ಷ್ಯ ಮುಂತಾದವುಗಳ ವಿರುದ್ಧ ರೈತರು ಒಗ್ಗಟ್ಟಾಗಿ ಬಲಿಷ್ಟ ಹೋರಾಟ ನಡೆಸಬೇಕೆಂದು ಕರೆ ಕೊಟ್ಟರು. ಈ ಸಭೆಗೆ ಅತಿಥಿಗಳಾಗಿ ಆಗಮಿಸಿದ್ದ ಎಸ್.ಎಫ್.ಐ. ರಾಜ್ಯ ಪ್ರಧಾನ ಕಾರ್ಯದರ್ಶಿ ಶಾಂತರೇಣುಕಾರಾಧ್ಯ ರವರು ಮಾತನಾಡುತ್ತಾ ಬಡರೈತರ, ಕಾರ್ಮಿಕರ ಮಕ್ಕಳು ಇಂದಿನ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವುದು ದುಸ್ತರವಾಗಿದೆಯೆಂದೂ, ರಾಜ್ಯದಲ್ಲಿರುವ ಬಹುತೇಕ ಖಾಸಗಿ ವಿದ್ಯಾಸಂಸ್ಥೆಗಳು ಡೊನೇಶನ್ ಮುಂತಾದವುಗಳಿಂದ ಬಡವಿದ್ಯಾರ್ಥಿಗಳನ್ನು ಶೋಷಿಸುತ್ತಿದ್ದು, ಇದನ್ನು ವಿರೋಧಿಸಿ ಹೋರಾಟ ನಡೆಸುತ್ತಿರುವ ಫೆಡರೇಷನ್‌ಗೆ ರೈತರ ಸಹಕಾರ ಕೋರಿದರು. ನಂತರ ಕಾಂ.ವೆಂಕಟರಾಮಯ್ಯನವರು ಮುಳುಬಾಗಿಲಿನ ಎಂ.ಇ.ಎಸ್. ಕಾಲೇಜಿನ ಅವ್ಯವಹಾರದ ಬಗ್ಗೆ ವಿವರಿಸಿ ರೈತರು ಈ ಕಡೆ ಗಮನಕೊಡಬೇಕೆಂದು ಹೇಳಿದರು. ಕಾರ್ಯದರ್ಶಿ ಕಾಂ. ದೇವರಾಜ್ ವಂದನಾರ್ಪಣೆ ಮಾಡಿದರು. ಸಂಜೆ ಹರಿಜನರ ಕಾಲೋನಿಯಲ್ಲಿ ದಲಿತ ಸಂಘರ್ಷ ಸಮಿತಿಯವರು ಕಾರ್ಯಕ್ರಮವೊಂದನ್ನು ಏರ್ಪಡಿಸಿದ್ದರು.

○

........ಚಟುವಟಿಕೆಯ ಹಿನ್ನೆಲೆಯಲ್ಲಿ ಸಿ.ಪಿ.ಐ.

[5ನೇ ಪುಟದಿಂದ]

ಪತ್ರಿಕೆಯಲ್ಲಿದೆ. ಅದರಲ್ಲಿ, "ತನ್ನ ತಳಹದಿಯನ್ನು ವಿಸ್ತರಿಸಿಕೊಳ್ಳುವುದರಲ್ಲಿ ವಾಮರಂಗವು ಶೋಚನೀಯವಾಗಿ ಸೋತಿದೆ ಎಂಬುದರ ಪರೋಕ್ಷ ಒಪ್ಪಿಗೆಯೇ ಬ್ರಿಗೇಡ್ ಪರೇಡ್ ಗ್ರೌಂಡ್ ರ್‍ಯಾಲಿಯ ಏರ್ಪಾಡು. ಸರ್ಕಾರವನ್ನು ಉರುಳಿಸಲು 'ಒಂದು ಪಿತೂರಿಯನ್ನು' ಆಪಾದಿತ ದುಷ್ಟಶಕ್ತಿಗಳು ನಡೆಸಿದ್ದಾರೆ ಎಂಬುದರ ಒಪ್ಪಿಗೆಯೂ ಹೌದು" ಎಂದು ಹೇಳಲಾಗಿದೆ.

ವಾಮರಂಗದ ವಿರೋಧಿ ಪಿತೂರಿಯ ಸಂಘಟಕರು ವಾಮರಂಗ ಸರ್ಕಾರದ ವಿರುದ್ಧ ನಡೆಸಿರುವ ಆಪಾದನೆಗಳು ಸಂಪಾದಕೀಯ ಮತ್ತು ಪರಿಶೀಲನಾ ಲೇಖನಗಳಲ್ಲಿ ಮತ್ತೆ ಮತ್ತೆ ಹೇಳಲಾಗಿದೆ. ಹೀಗಾಗಿ ಪ. ಬಂಗಾಳದ ವಾಮರಂಗ ಮತ್ತು ಅದರ ಸರ್ಕಾರದ ವಿರುದ್ಧದ ಪಿತೂರಿಗಾರರ ಗುಂಪಿಗೆ ಕಮ್ಯುನಿಸ್ಟ್ ಪಕ್ಷ (ಮತ್ತು ಕಾಂಗ್ರೆಸ್ಸಿನ ಪ್ರಗತಿಶೀಲರು) ಸೇರಿದೆ ಎಂಬುದನ್ನು ಈ ಎರಡು ಲೇಖನಗಳು ಸ್ಪಷ್ಟಮಾಡುತ್ತವೆ.

ಪಿತೂರಿಗಾರರಿಗೆ ನೆವ :

ಸಂಜಯಗಾಂಧಿಯವರ ಹೆಜ್ಜೆಯನ್ನು ಅನುಸರಿಸುತ್ತಿರುವ ಕಾಂಗ್ರೆಸ್ (ಐ) ಗುಂಪು ಮತ್ತು ಜನತಾಪಕ್ಷದ ಪಿ. ಸಿ. ಸೇನ್ ಅವರಿಂದ ಕಮ್ಯುನಿಸ್ಟ್ ಪಕ್ಷವನ್ನು ಬೇರ್ಪಡಿಸುವ ಪ್ರಯತ್ನವನ್ನೇನೋ ಮಾಡಲಾಗಿದೆ. ಆದರೆ ನ್ಯೂಏಜ್‌ನ ಪ್ರಕಾರವೇ ಪ್ರತಿಗಾಮಿಗಳೆಂದು ಕರೆಸಿಕೊಳ್ಳುತ್ತಿರುವವರು ನಡೆಸುತ್ತಿರುವ ಪ್ರಚಾರಕ್ಕೆ ಕಮ್ಯುನಿಸ್ಟ್ ಪಕ್ಷ ಅನ್ಯತ್ರ ನೆವ ಹೇಳುತ್ತಿದೆಯೆಂಬ ವಿಚಾರವನ್ನು ಇದರಿಂದ ಮರೆಮಾಚಲಾಗುವುದಿಲ್ಲ.

ನ್ಯೂ ಏಜ್ ನ ಸಂಪಾದಕೀಯವು ವಾಮರಂಗ ಮತ್ತದರ ಸರ್ಕಾರಕ್ಕೆ ಉಪದೇಶಗಳನ್ನು ಕೊಟ್ಟಿದೆ:-

"ಯಾವ ಸ್ಪರ್ಧಾತ್ಮಕ ದೈಹಿಕ ಬಲದ ಪ್ರದರ್ಶನವನ್ನೂ ಮಾಡದೆ, ದಂಗೆಯನ್ನು ರಾಜಕೀಯವಾಗಿ ಮತ್ತು ಪ್ರಜಾಪ್ರಭುತ್ವವಾದಿಯಾಗಿ ಪರಿಹರಿಸಬೇಕು". (ಎಂದರೆ, ಪಿತೂರಿಗಾರರ ವಿರುದ್ಧ ಜನತೆಯನ್ನು ಒಂದುಗೂಡಿಸಬಾರದು)

"ಸರ್ಕಾರದ ರಾಜಕೀಯ ವಿರೋಧಿಗಳ ಬಗ್ಗೆ ಪೋಲೀಸರು ಸಂಯಮದಿಂದ ವರ್ತಿಸುವಂತೆ ಮಾಡಬೇಕು."

"ಪ್ರತಿಗಾಮಿಗಳನ್ನು ಬೇರ್ಪಡಿಸುವ ಹಾಗೆ ಮಾರ್ಕ್ಸ್‌ವಾದಿ ಪಕ್ಷ ಮತ್ತು ರಂಗದ ಇತರ ನಾಯಕರು ವರ್ತಿಸಿ, ಸರ್ಕಾರವನ್ನು ನಡೆಸಬೇಕು."

"ವಾಮರಂಗ ಮತ್ತು ಪಶ್ಚಿಮ ಬಂಗಾಳದ ಸರ್ಕಾರವು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದುಗೂಡಿಸುವ ಹಾಗೆ ತನ್ನ ನೀತಿಗಳು ಮತ್ತು ಕ್ರಿಯೆಗಳನ್ನು ರೂಪಿಸಬೇಕೆಂದು ದೇಶದ ರಾಜಕೀಯ ಪರಿಸ್ಥಿತಿಯು ಒತ್ತಾಯಿಸುತ್ತದೆ".

"ಪಿತೂರಿ ಎಂದು ಅವರು ಕರೆದಿರುವುದು ಪಿ. ಸಿ. ಸೇನ್ ಮತ್ತು ಇತರ ಜನತಾ ನಾಯಕರ ಬಗ್ಗೆ ಮಾಡಿದ ತಪ್ಪುದಾರಿ ಹೇಳಿಕೆಯಷ್ಟೇ ಅಲ್ಲ, ಅದು ವಾಮರಂಗ ಸರ್ಕಾರಕ್ಕೆ ಬಂದ್ದಿರುವ ವರ್ಗ ಪ್ರತಿಕ್ರಿಯೆಯೂ ಹೌದು."

ಹಳೆಪ್ರಚಾರದ ಹೊಸ ರೂಪ :

ಈ ಎಲ್ಲ "ಉಪದೇಶ"ದ ಹಿಂದೆ ಅಡಗಿರುವುದು, ಪಿ. ಸಿ. ಸೇನ್ ಮತ್ತು ಇತರರು ನಡೆಸಿರುವ ಪ್ರಚಾರವು ಸಮರ್ಥನೀಯ ಎಂದು ಹೇಳುವ ಬಹಿರಂಗ ಪ್ರಯತ್ನ. 1967ರ ಮತ್ತು 1969ರ ಎರಡು ವಾಮರಂಗ ಸರ್ಕಾರಗಳ ಬಗ್ಗೆ, ಕಮ್ಯುನಿಸ್ಟ್ ಪಕ್ಷ, ಬಾಂಗ್ಲಾ ಕಾಂಗ್ರೆಸ್ ಮತ್ತು ಕಾಂಗ್ರೆಸ್‌ನ "ಪ್ರಗತಿಶೀಲರು" ಹಿಂದೆ ನಡೆಸಿದ ಉನ್ಮತ್ತ ಪ್ರಚಾರಗಳನ್ನು ಇದು ನೆನಪಿಗೆ ತರುತ್ತದೆ. ಈ ಪ್ರಚಾರದ ನಂತರ ಕಮ್ಯುನಿಸ್ಟ್ ಪಕ್ಷವು, ಮೊದಲು ಪ. ಬಂಗಾಳದಲ್ಲಿ ಕಾಲಿಟ್ಟು ನಂತರ ಎರಡು ವರ್ಷಗಳ ತುರ್ತುಪರಿಸ್ಥಿತಿಯ ಮೂಲಕ ಇಡೀ ದೇಶಕ್ಕೆ ಹರಡಿದ ಇಂದಿರಾ ಸರ್ವಾಧಿಕಾರದ ಜೊತೆ ಹೀನ ಮೈತ್ರಿಯನ್ನು ಆರಂಭಿಸಿತು.

ಈಗೇನೋ ಕಾಲ ಬದಲಾಗಿದೆ. ಇಂದಿರಾ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿದೆ. ಅದು ಅಧಿಕಾರಕ್ಕೆ ಬರಲು ಮಾಡುತ್ತಿರುವ ಹವಣಿಕೆಗಳೆಲ್ಲ ಒಂದಲ್ಲ ಒಂದು ಬಿಕ್ಕಟ್ಟಿನಲ್ಲಿ ಬೀಳುತ್ತಿವೆ. ತುರ್ತುಪರಿಸ್ಥಿತಿಯ ಘಟ್ಟದಲ್ಲಾದರೂ ತಾವು ಇಂದಿರಾ ಕಾಂಗ್ರೆಸ್‌ನ ಜೊತೆ ಸೇರಿದುದು ತಪ್ಪು ಎಂಬ ಅರೆಒಪ್ಪಿಗೆಯನ್ನು ಕಮ್ಯುನಿಸ್ಟ್ ಪಕ್ಷದ ನಾಯಕರೇ ಮಾಡಿಕೊಳ್ಳುವಂತಾಯಿತು. (1969-77ರ ವರೆಗೆ ಇಂದಿರಾ ಕಾಂಗ್ರೆಸ್ ಜೊತೆ ಸೇರಿ ಯಾವುದರ ವಿರುದ್ಧ ಪಿತೂರಿ ನಡೆಸಿದ್ದರೋ ಆ) ಮಾರ್ಕ್ಸ್‌ವಾದಿ ಪಕ್ಷಕ್ಕೂ ಒಳ್ಳೆಯ ಸ್ಥಾನವಿರುವ ಒಂದು "ರಾಷ್ಟ್ರೀಯ ರಂಗ"ದ ರಚನೆಗೆ ಇಂದು ಅವರು ಓಡಾಡುತ್ತಿದ್ದಾರೆ.

* ಈಗ ಪ್ರಶ್ನೆ ಏಳುತ್ತದೆ: ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ವಾಮ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಇಂದಿರಾಕಾಂಗ್ರೆಸ್ ಮತ್ತು ಅದರ ಅಧಿಕಾರಶಾಹಿ ಆಳಿಕೆಯ ವಿರುದ್ಧ ನಡೆಸಿದ ಕಷ್ಟಕರ ಆದರೆ ದೃಢ ಹೋರಾಟದ ಫಲವಾಗಿ ಪಶ್ಚಿಮ ಬಂಗಾಳ (ಮತ್ತು ತ್ರಿಪುರಾದ) ವಾಮರಂಗ ಸರ್ಕಾರ ಬಂದಿದೆ ಎಂದು ಕಮ್ಯುನಿಸ್ಟ್ ಪಕ್ಷದ ನಾಯಕರು ಒಪ್ಪಿಕೊಳ್ಳುವರೆ?

* ಪ್ರಾರಂಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಎಡ ಪಂಥದ ಸ್ನೇಹಿತರು ಮಾತ್ರ ಪಶ್ಚಿಮ ಬಂಗಾಳದಲ್ಲಿ ಇಂದಿರಾ ಸರ್ವಾಧಿಕಾರದ ವಿರುದ್ಧ ಒಬ್ಬೊಂಟಿಯಾಗಿ ಹೋರಾಡಬೇಕಾಯಿತು, ಕಮ್ಯುನಿಸ್ಟ್ ಪಕ್ಷದ ನಾಯಕರು ಅಧಿಕಾರಶಾಹಿಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರು, ಇಂದು ಪ್ರತಿಗಾಮಿಗಳೆಂದು ಕರೆಸಿಕೊಂಡವರೇ ಮಾರ್ಕ್ಸ್‌ವಾದಿ ಪಕ್ಷಕ್ಕೆ ಅಂದು ಪರೋಕ್ಷವಾದ ಸಹಾನುಭೂತಿ ಮತ್ತು ಬೆಂಬಲ ನೀಡಿದರು, ಎಂಬ ಅಂಶಗಳನ್ನು ಕಮ್ಯುನಿಸ್ಟ್ ಪಕ್ಷದ ನಾಯಕರು ಅರಿತುಕೊಂಡಿದ್ದಾರೆಯೆ?

* ಪ. ಬಂಗಾಳ ಮತ್ತು ತ್ರಿಪುರಾಗಳ ವಾಮರಂಗ ಮತ್ತು ಅದರ ಸರ್ಕಾರಗಳು, ಇಂದಿರಾ ಅಧಿಕಾರಿಶಾಹಿ ವಿರೋಧಿಸುವ ಹೋರಾಟದ ಫಲವಷ್ಟೇ ಅಲ್ಲ, ಜನತಾಪಕ್ಷದ ಪ್ರತಿಗಾಮಿಗಳ ವಿರುದ್ಧದ ಹೋರಾಟದ ಫಲವೂ ಕೂಡ ಎಂಬುದನ್ನೂ ಅವರು ಅರಿತುಕೊಳ್ಳುತ್ತಾರೆಯೆ?

ಇದನ್ನೆಲ್ಲ ಅವರು ಅರಿತುಕೊಂಡರೆ, ಪ. ಬಂಗಾಳ ಮತ್ತು ತ್ರಿಪುರಾಗಳ ಸರ್ಕಾರಗಳು, ಇಂದಿರಾ ಕಾಂಗ್ರೆಸ್‌ನ ಅಧಿಕಾರಿಶಾಹಿ ಮತ್ತು ಆರೆಸ್ಸೆಸ್‌ನ ಕೋಮುವಾದಗಳನ್ನು ವಿರೋಧಿಸುವ ಒಂದು ದೃಢ ರಾಷ್ಟ್ರೀಯ ಪರ್ಯಾಯವನ್ನು ಕಟ್ಟಲು ಯತ್ನಿಸುತ್ತಿರುವವರೆಲ್ಲರಿಗೂ ಸೇರಿದ ಆಸ್ತಿ ಎಂದು ಭಾವಿಸಬೇಕು.

ಅಧಿಕಾರಶಾಹಿಯ ವಿರುದ್ಧ ಹೋರಾಡುವ ಕ್ರಮಗಳನ್ನು ರೂಪಿಸಲು ಆಶಿಸಿದ ವಿನಿಮಯವೊಂದರಲ್ಲಿ, ತಿಂಗಳಿಗೆ ಹಿಂದೆ ಕಮ್ಯುನಿಸ್ಟ್ ನಾಯಕರು ನಮ್ಮ ಮತ್ತು ಇತರ ಸ್ನೇಹಿತರ ಜೊತೆ ಭಾಗವಹಿಸಿದ್ದರು. ಅಧಿಕಾರಿಶಾಹಿ ವಿರೋಧಿ ಹೋರಾಟದ ಅತ್ಯುತ್ತಮ ಫಲವಾದ ಈ ಸರ್ಕಾರದ ವಿರುದ್ಧ ಪಿತೂರಿ ನಡೆಸುವವರ ಜೊತೆ ಅವರು ಇಟ್ಟುಕೊಂಡಿರುವ ಬಹಿರಂಗ ಬಾಂಧವ್ಯಕ್ಕೂ ಆ ದಿಶೆಯ ಪ್ರಯತ್ನಕ್ಕೂ ಎಲ್ಲಿಯ ಸಂಬಂಧ?

ಪಿತೂರಿಯ ಹಿನ್ನೆಲೆಯಲ್ಲಿ :

ನಮ್ಮ ಪಕ್ಷದ ನೇತೃತ್ವದಲ್ಲಿರುವ ವಾಮರಂಗ ಸರ್ಕಾರಗಳ ಬಗ್ಗೆ ಅರ್ಥಪೂರ್ಣವಾದ ರಚನಾತ್ಮಕವಾದ ವಿಮರ್ಶೆಮಾಡಿದರೆ ನಾವು ಸ್ವಾಗತಿಸುತ್ತೇವೆ. ವಿಮರ್ಶೆ ಮಾಡತಕ್ಕದ್ದು ಏನೂ ಇಲ್ಲ ಎಂದು ನಾವು ಭಾವಿಸಿಲ್ಲ. ಆದರೆ, ಅಧಿಕಾರಿಶಾಹಿಯ ವಿರುದ್ಧದ ಜನತೆಯ ಹೋರಾಟದ ಒಂದು ಅಸ್ತ್ರವಾಗಿ ವಾಮರಂಗ ಮತ್ತು ಅದರ ಸರ್ಕಾರವನ್ನು ಸುಧಾರಿಸಲು ಬಯಸುವವರಿಂದ ವಿಮರ್ಶೆ ಬರುತ್ತದೋ ಅಥವಾ ವಾಮರಂಗ ಸರ್ಕಾರವನ್ನು ಉರುಳಿಸಲು ಪ್ರತಿಗಾಮಿಗಳು ನಡೆಸುವ ಪ್ರಯತ್ನಗಳಿಗೆ ಸಹಾಯ ಮಾಡುವ ವಿಮರ್ಶೆ ಬರುತ್ತದೋ ಎಂಬುದು ಇಲ್ಲಿ ಮುಖ್ಯ.

ನ್ಯೂಏಜ್‌ನಲ್ಲಿ ಬಂದ ಎರಡು ಲೇಖನಗಳು, ವಾಮರಂಗ ಸರ್ಕಾರವನ್ನು ರಕ್ಷಿಸಲು ಮತ್ತು ಬಲಪಡಿಸಲು ಆಶಿಸುವವರಿಂದ ಬಂದ ಅರ್ಥಪೂರ್ಣ ರಚನಾತ್ಮಕ ವಿಮರ್ಶೆ ಅಲ್ಲ. ಪಿ. ಸಿ. ಸೇನ್ ಮತ್ತಿತರ ನಡೆಸಿರುವ ಪಿತೂರಿಯ ಹಿಂದೆ ಕಮ್ಯುನಿಸ್ಟ್ ಪಕ್ಷವನ್ನೂ ಬಹಿರಂಗವಾಗಿ ಸೇರಿಸುವ ಪ್ರಯತ್ನದ ಭಾಗವಾಗಿ ಅವು ಬಂದಿವೆ.

1967-69ರಲ್ಲಿ ಕಮ್ಯುನಿಸ್ಟ್ ಪಕ್ಷ, ಬಾಂಗ್ಲಾ ಕಾಂಗ್ರೆಸ್ ಮತ್ತು ಇಂದಿರಾ ಕಾಂಗ್ರೆಸ್‌ಗಳು ಒಟ್ಟಾಗಿ, ಸಂಯುಕ್ತ ರಂಗ ಸರ್ಕಾರದ ವಿರುದ್ಧ ಪ. ಬಂಗಾಳದಲ್ಲಿ ನಡೆಸಿದ ಪ್ರಚಾರಕ್ಕೂ ಈಗಿನದಕ್ಕೂ ತೀರ ಹತ್ತಿರದ ಹೋಲಿಕೆಯಿದೆ. ಪಿ. ಸಿ. ಸೇನ್ ಮತ್ತು ಇತರರಿಂದ ತಾವು ಬೇರ್ಪಟ್ಟವರೆಂದು ಹೇಳಿಕೊಂಡರೂ ಅವರ ಪ್ರಚಾರಗಳಿಗೆ ಕಮ್ಯುನಿಸ್ಟ್ ಪಕ್ಷ ಪೂರ್ಣಬೆಂಬಲ ನೀಡುತ್ತಿದೆ. ಇರುವ ಒಂದೇ ವ್ಯತ್ಯಾಸವೆಂದರೆ, ಆಗ ಅವರು ತಾವೂ ಭಾಗವಹಿಸುತ್ತಿದ್ದ ಸರ್ಕಾರದ ವಿರುದ್ಧ ಪ್ರಚಾರ ನಡೆಸಿದರೆ, ಈಗ ಅವರು ಸರ್ಕಾರದಿಂದ ಹೊರಗಿದ್ದಾರೆ ಎಂಬುದು.

●

ಕೊಡಗು ಜಿಲ್ಲೆಯಲ್ಲಿ ಹಳಿಯಾಳದ ರೈತರಿಗೆ ಬೆಂಬಲ

ಹಳಿಯಾಳದಲ್ಲಿ ರೈತರ ಮೇಲೆ ಪೋಲೀಸ್ ಆಕ್ರಮಣವನ್ನು ಖಂಡಿಸಿ ಕೊಡಗಿನ ವಿವಿಧ ಕಡೆಗಳಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಗೋಣಿಕೊಪ್ಪಲಿನಲ್ಲಿ

ಪಕ್ಷದ ಹಿತೈಷಿಗಳು ತಾ॥ 10-6-79 ರಂದು ಕಪ್ಪುಧ್ವಜ ಧರಿಸಿ ಮೌನ ಮೆರವಣಿಗೆ ನಡೆಸಿದರು. ಈ ಮೆರವಣಿಗೆಯಲ್ಲಿ 30 ಜನರು ಭಾಗವಹಿಸಿದ್ದರು. 20-6-79 ರಂದು ಪೋಲೀಸ್ ವರ್ತನೆಯನ್ನು ಖಂಡಿಸಿ ಭಿತ್ತಿಪತ್ರಗಳನ್ನು ಅಂಟಿಸಿದರು.

ಚೆಟ್ಟಳ್ಳಿಯಲ್ಲಿ

ಸುಮಾರು 150 ಕಾರ್ಮಿಕರು ಶ್ರೀಮಂಗದಿಂದ ಚೆಟ್ಟಳ್ಳಿಯವರೆಗೆ ಕಾಂ. ಲತೀಫ್‌ರವರ ನೇತೃತ್ವದಲ್ಲಿ ಪಂಜಿನ ಮೆರವಣಿಗೆ ನಡೆಸಿದರು. (ತಾ॥ 14-6-79)

ಸಿದ್ದಾಪುರದಲ್ಲಿ

ಸುಮಾರು 100 ಕಾರ್ಮಿಕರು ತಾ॥ 17-6-79 ರಂದು ಪಟ್ಟಣದಾದ್ಯಂತ ಪ್ರದರ್ಶನ ನಡೆಸಿ, ಪೋಲೀಸ್ ಠಾಣೆಯ ಮುಂಬಾಗದಲ್ಲಿ ಪ್ರತಿಭಟನಾ ಸಭೆ ನಡೆಸಿದರು. ಇಲ್ಲಿ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಸಹಕಾರ್ಯದರ್ಶಿ ಕಾಂ. ಲತೀಫ್‌ಕುರಿಪ್ಪನ್, ಹಿತೈಷಿಗಳಾದ ಕುಟ್ಟಪ್ಪನ್, ನಾರಾಯಣ, ವಾಸು, ರವರು ಮುಂದಾಳುತ್ವ ವಹಿಸಿದ್ದರು.

ಕುಟ್ಟದಲ್ಲಿ

ಪಾರ್ಟಿ ಹಿತೈಷಿಗಳು ತಾ॥ 10 ರಂದು ಮೌನ ಮೆರವಣಿಗೆ ನಡೆಸಿದರು.

ಅಲ್ಲದೆ ರೈತರ ಹೋರಾಟವನ್ನು ಬೆಂಬಲಿಸಿ 1000 ಹಸ್ತ ಪತ್ರಿಕೆಯನ್ನು ವಿರಾಜಪೇಟೆ, ಕುಟ್ಟ, ಗೋಣಿಕೊಪ್ಪ, ತಿತಿಮತಿ, ಸಿದ್ದಾಪುರ, ಚೆಟ್ಟಳ್ಳಿ, ಸುಂಟಿಕೊಪ್ಪದಲ್ಲಿ ಹಂಚಲಾಗಿದೆ.

●

ಶಿಡ್ಲಘಟ್ಟ ಸಾರ್ವಜನಿಕರ ಮನವಿ

ಬೆಂಗಳೂರು - ಬಂಗಾರಪೇಟೆ ಮಧ್ಯೆ ಯಲಹಂಕ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಶ್ರೀನಿವಾಸಪುರ ಮತ್ತು ಕೋಲಾರ ಮಾರ್ಗವಾಗಿ ಹೋಗುವ ನ್ಯಾರೋಗೇಜ್ ರೈಲು ಸಂಚಾರವನ್ನು ಈಗ ರದ್ದುಗೊಳಿಸುವುದರಿಂದ ವಿಪರೀತ ತೊಂದರೆಗಳಾಗಿವೆ. ಈ ಸಂಚಾರದ ರದ್ದಿನಿಂದ ಸಣ್ಣ ಸಣ್ಣ ವ್ಯಾಪಾರಿಗಳಿಗೆ, ವಿದ್ಯಾರ್ಥಿಗಳಿಗೆ, ಸಂತೆಗಳಿಗೆ ಹೋಗುವ ರೈತರಿಗೆ ಹಾಗೂ ಅಕ್ಕಪಕ್ಕದ ಗ್ರಾಮಸ್ಥರಿಗೆ ತುಂಬ ತೊಂದರೆಯಾಗಿದೆ. ಬೇರೆ ರೀತಿಯ ಸಾರಿಗೆಯೂ ಇಲ್ಲದೆ, ಚಿಂತಾಮಣಿ, ಚಿಕ್ಕಬಳ್ಳಾಪುರದ ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಕಷ್ಟಕ್ಕಿಟ್ಟುಕೊಂಡಿದೆ. ಆದ್ದರಿಂದ ಜನಸಾಮಾನ್ಯರೆಲ್ಲರಿಗೂ ಅನುಕೂಲವಾಗುವ ಈ ರೈಲು ಸಂಚಾರವನ್ನು ಮತ್ತೆ ಮುಂದುವರೆಸಬೇಕೆಂದು ಮನವಿ ತಯಾರಿಸಿ, ಅದಕ್ಕೆ ಒಂದು ಸಾವಿರ ಜನರ ಸಹಿ ಮಾಡಿಸಿ, ಶಿಡ್ಲಘಟ್ಟದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಮಿತಿ ಅರ್ಪಿಸಿದೆ. ○

ಪ್ರೆಸ್ ವರ್ಕರ್ಸ್ ಯೂನಿಯನ್ ಮಹಾಸಭೆ

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ 42ನೇ ವಾರ್ಷಿಕ ಮಹಾಸಭೆಯು ಇದೇ ತಾ. 8-7-79 ರಂದು ಸಂಘದ ಆಫೀಸಿನಲ್ಲಿ ಕಾಂ. ಪಿ. ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿಯವರಾದ ಕಾಂ. ಬಿ. ಉಮಾನಾಥ್‌ರವರು ಸಭಿಕರನ್ನು ಸ್ವಾಗತಿಸಿ, ವಾರ್ಷಿಕ ವರದಿಯನ್ನು ಓದಿದರು.

ಸಭೆಯು ಈ ವರದಿಯನ್ನು ಹಾಗೂ ಈ ಕೆಳಗಿನ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

1) ಪ್ರೆಸ್ ಕಾರ್ಮಿಕರಿಗೆ ಕನಿಷ್ಟ ರೂ. 350 ನ್ನು ಮಾಸಿಕ ವೇತನವಾಗಿ ಜಾರಿಗೊಳಿಸಬೇಕು.

2) ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ತಡೆಗಟ್ಟಬೇಕು.

3) ಸೀಮೆಎಣ್ಣೆಯನ್ನು ಪೇಟೆ ಪಟ್ಟಣಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯ ಬೆಲೆಯಲ್ಲಿ ಸರಿಯಾಗಿ ವಿತರಣೆ ಮಾಡಬೇಕು.

4) ನ್ಯಾಯಬೆಲೆ ಅಂಗಡಿಗಳಲ್ಲಿ ಬೇಕಾದಷ್ಟು ಅಕ್ಕಿಯನ್ನು ಸರಿಯಾಗಿ ವಿತರಣೆ ಮಾಡಬೇಕು.

5) ರೈಲ್ವೆ ನೌಕರರಿಗೆ ಬೋನಸ್ಸನ್ನು ಜಾರಿಮಾಡಬೇಕು.

6) ಬೀಡಿಕಾರ್ಮಿಕರಿಗೆ ಕನಿಷ್ಠ ರೂ 5-75 ನ್ನು ಏಪ್ರಿಲ್ ಒಂದರಿಂದಲೇ ಜಾರಿಗೊಳಿಸಬೇಕು.

7) ಸಭೆಯು ಪ. ಬಂಗಾಳ ಹಾಗೂ ತ್ರಿಪುರಾಗಳ ಎಡರಂಗ ಸರಕಾರಕ್ಕೂ ಮತ್ತು ಹಳಿಯಾಳ ರೈತರ ಹೋರಾಟಕ್ಕೆ ತನ್ನ ಬೆಂಬಲ ಸೂಚಿಸಿತು.

ಸಭೆಯು ಮುಂದಿನ ವರ್ಷಕ್ಕೆ ಈ ಕೆಳಗಿನ ಪದಾಧಿಕಾರಿಗಳನ್ನು ಚುನಾಯಿಸಿ, 21 ಜನರುಳ್ಳ ಕಾರ್ಯಕಾರಿ ಸಮಿತಿಯನ್ನು ರಚಿಸಿತು.

ಅಧ್ಯಕ್ಷ:- ಕಾಂ. ಪಿ. ರಾಮಚಂದ್ರ ರಾವ್

ಕಾರ್ಯದರ್ಶಿ: ಕಾ. ಬಿ. ಉಮಾನಾಥ್

ಉಪಾಧ್ಯಕ್ಷರುಗಳು: **1. ಕಾಂ. ಪಾವ್ಲ್ ಡಿ'ಸೋಜ 2. ಕಾಂ. ಮೂಸಬ್ಬ**

ಜತೆ ಕಾರ್ಯದರ್ಶಿಗಳು:

1. ಕಾಂ. ಕೆ. ಮಂಜುನಾಥ

2. ಕಾಂ. ಸದಾಶಿವಶೆಟ್ಟಿ

ಕೋಶಾಧಿಕಾರಿ: ಕಾಂ. ಜನಾರ್ಧನ

ಕೊನೆಯಲ್ಲಿ ಅಧ್ಯಕ್ಷರಾದ ಪಿ. ರಾಮಚಂದ್ರರಾವ್‌ರವರು ದೇಶದ ಪ್ರಚಲಿತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದ ನಂತರ, ಕಾಂ. ಉಮಾನಾಥ್‌ರವರು ಸಭಿಕರಿಗೆಲ್ಲಾ ಧನ್ಯವಾದ ಅರ್ಪಿಸುವುದರೊಂದಿಗೆ ಈ ಸಭೆಯು ಮುಕ್ತಾಯವಾಯಿತು. ●

ಗುಳ್ಳಹಟ್ಟಿ ಕಾವಲ್ ಗ್ರಾಮದಲ್ಲಿ ಸಭೆ

ಬೆಂಗಳೂರು ಜಿಲ್ಲೆ ಕನಕಪುರ ತಾಲ್ಲೂಕು ಹಾರೋಹಳ್ಳಿ ಹೋಬಳಿಗೆ ಸೇರಿದ ಗುಳ್ಳಹಟ್ಟಿಕಾವಲ್ ಗ್ರಾಮದಲ್ಲಿ ಹರಿಜನ ರೈತರು ಸರ್ಕಾರದ ಪರಿಹಾರ ಜಮೀನನ್ನು ಪಡೆದು ವಾಸವಾಗಿದ್ದಾರೆ. ಗ್ರಾಮವಾಸಿಯಾದ ಬಿ.ಸಿ. ಮಲ್ಲಯ್ಯ ಎಂಬುವರು 40-50 ಎಕರೆ ಜಮೀನನ್ನು ಅಕ್ರಮವಾಗಿ ವಶದಲ್ಲಿಟ್ಟುಕೊಂಡು ರೈತರಿಗೆ ಮೋಸ ಮಾಡುತ್ತಿದ್ದಾರೆ. ಈ ಅನ್ಯಾಯವು ಬೆಂಗಳೂರು ಜಿಲ್ಲಾ ರೈತಸಂಘದ ಗಮನಕ್ಕೆ ಬಂದು, ಇದರ ಆಶ್ರಯದಲ್ಲಿ ಮೇ ತಿಂಗಳಲ್ಲಿ ಒಂದು ಮೆರವಣಿಗೆ ನಡೆದು ಜಿಲ್ಲಾಧಿಕಾರಿಗಳು ಮತ್ತು ಅರಣ್ಯ ಅಧಿಕಾರಿಗಳಿಗೆ ಮನವಿ ಅರ್ಪಿಸಲಾಗಿತ್ತು. ಅರಣ್ಯಾಧಿಕಾರಿಗಳ ಆಜ್ಞೆಯಂತೆ ಜಮೀನು ಹಂಚಿಕೆ ಮಾಡಬೇಕೆಂದು ರೈತರು ಕನಕಪುರದ ತಹಸೀಲ್ದಾರರಿಗೂ ಮನವಿ ಅರ್ಪಿಸಿದ್ದರು. ಆದರೂ ಜಮೀನು ಹಂಚಿಕೆ ಇದುವರೆಗೆ ಕಾರ್ಯಗತವಾಗಿಲ್ಲ. ಗ್ರಾಮದ ರೈತರನ್ನು ದೌರ್ಜನ್ಯದಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಈ ಅನ್ಯಾಯವನ್ನು ಪ್ರತಿಭಟಿಸಲು, ದಿನಾಂಕ 16-7-79 ರಂದು ಗುಳ್ಳಹಟ್ಟಿಕಾವಲ್ ಗ್ರಾಮದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಮುಗುಳಪ್ಪ, ಕಾರ್ಯಕಾರಿ ಸಮಿತಿಯ ಸದಸ್ಯ ಕಾಂ. ಶಾಮಣ್ಣ ರೆಡ್ಡಿ, ಜಿಲ್ಲಾ ರೈತಸಂಘದ ಸಹಕಾರ್ಯದರ್ಶಿ ಕಾಂ. ಲಕ್ಕಣ್ಣ ಇವರು ಸಭೆಯಲ್ಲಿ ಮಾತನಾಡಲಿದ್ದಾರೆ. ○

......ಎರಡು ವರ್ಷಗಳ ಗಮನಾರ್ಹ ಸಾಧನೆ

[3ನೇ ಪುಟದಿಂದ]

ಬೆಳವಣಿಗೆ ಸಾಧ್ಯವಿಲ್ಲ ಎಂಬುದನ್ನು ಅರಿತುಕೊಂಡಿದ್ದರಿಂದ ಪ್ರಸ್ತುತ ಸರ್ಕಾರವು ತನ್ನ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಾಕಷ್ಟು ಒತ್ತು ಕೊಟ್ಟಿತು. ಈ ಬಜೆಟ್‌ನ ⅓ ಭಾಗವನ್ನು ಈ ಉದ್ದೇಶಕ್ಕೆ ಮೀಸಲಿಡಲಾಗಿದೆ. ಸದ್ಯದ ಮಂತ್ರಿಮಂಡಲ ಬರುವುದಕ್ಕೆ ಒಂದು ವರ್ಷದ ಹಿಂದೆ, ಕಾಂಗ್ರೆಸ್ ಸರ್ಕಾರ ನೀಡಿದ್ದಕ್ಕಿಂತ 250 ಕೋಟಿರೂ. ಹೆಚ್ಚು ಹಣವನ್ನು ಈ ಸರ್ಕಾರ ನೀಡಿದೆ. 1981-82 ರಲ್ಲಿ ಎಂದರೆ, ಸದ್ಯದ ವಿಧಾನಸಭೆಯ ಕೊನೆಯ ವರ್ಷದಲ್ಲಿ ವಿವಿಧ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೂರನೇ ಎರಡು ಭಾಗದ ಬಜೆಟ್ ಹಣವನ್ನು ಮೀಸಲಿಡಲಾಗುವುದು ಎಂದು ಹಣಕಾಸು ಸಚಿವರು ಹೇಳಿದರು.

ವಾಮರಂಗ ಸರ್ಕಾರವು ಪಂಚಾಯತುಗಳಿಗೆ ವಿವಿಧ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ಕೊಟ್ಟಿದೆ. ಗ್ರಾಮೀಣ ಅಭಿವೃದ್ಧಿ ಕೆಲಸಗಳಿಗೆ ಕಳೆದ ವರ್ಷ 60 ಕೋಟಿ ರೂ. ಗಳನ್ನು ಅವುಗಳಿಗೆ ಹಂಚಲಾಯಿತು. ಈ ವರ್ಷ ಅದೇ ಉದ್ದೇಶಕ್ಕೆ 90 ಕೋಟಿ ರೂ. ಗಳನ್ನು ಕೊಡಲಾಗುತ್ತದೆ.

ದೊಡ್ಡ ಭೂಮಾಲೀಕರಿಗೆ ಹೆಚ್ಚು ತೆರಿಗೆ:

ದೊಡ್ಡ ಭೂಮಾಲೀಕರು ಮತ್ತು ಜೋತ್‌ದಾರರಿಗೆ ಇನ್ನಷ್ಟು ತೆರಿಗೆಗಳನ್ನು ಹಾಕಲು ಸರ್ಕಾರ ಯೋಚಿಸಿದೆ ಎಂದು ಡಾ. ಮಿತ್ರ ಹೇಳಿದರು. ಹಿಡುವಳಿಯ ಪ್ರಮಾಣ ಅನುಸರಿಸಿ ಹಾಕುವ ಈ ತೆರಿಗೆಯು ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ಬರುತ್ತದೆ. ರಾಜ್ಯ ವಿಧಾನಸಭೆಯಲ್ಲಿ ಈ ಬಗ್ಗೆ ಈಗಾಗಲೇ ಮಸೂದೆಯೊಂದನ್ನು ಅಂಗೀಕರಿಸಲಾಗಿದ್ದು, ಅದು ವಿಧಾನಸಭೆಯ ಆಯ್ಕೆ ಸಮಿತಿಯ ಪರಿಶೀಲನೆಯಲ್ಲಿದೆ. ವಿಧಾನಸಭೆಯ ಮುಂದಿನ ಅಧಿವೇಶನದಲ್ಲಿ ಅದನ್ನು ಮಂಡಿಸಲಾಗುತ್ತದೆ.

ನಿರುದ್ಯೋಗ ಭತ್ಯದ ವಿಚಾರದಲ್ಲಿ ಪ. ಬಂಗಾಳವು ದೇಶದ ಇತರ ರಾಜ್ಯಗಳಿಗೆ ದಾರಿತೋರಿಸಿದೆ ಎಂದು ಹಣಕಾಸು ಸಚಿವರು ಹೇಳಿದರು. ಸಂವಿಧಾನದ 41 ನೇ ಕಲಮಿನ ಪ್ರಕಾರ ನಿರುದ್ಯೋಗಿಗಳ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ವಹಿಸಬೇಕು. ದೇಶದ ಸದ್ಯದ ಸಾಮಾಜಿಕ-ಆರ್ಥಿಕ ರಚನೆ ನಿರುದ್ಯೋಗವನ್ನು ತಂದಿದೆ. ಕೇಂದ್ರವು ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಂಡಿರುವುದರಿಂದ, ರಾಜ್ಯಸರ್ಕಾರವೇ ತನ್ನ ಯೋಜನೆಗಳೊಡನೆ ಮುಂದುವರೆಯಬೇಕು.

ಗ್ರಾಮೀಣ ವಲಯದಲ್ಲಿ ಕೆಲಸಕ್ಕಾಗಿ ಆಹಾರ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಯೋಜನೆಗಳು ಉದ್ಯೋಗಗಳನ್ನು ಕಲ್ಪಿಸಿವೆ ಎಂದು ಹಣಕಾಸು ಸಚಿವರು ಹೇಳಿದರು. 1978-79ರಲ್ಲಿ 4 ತಿಂಗಳಲ್ಲಿ 10 ಲಕ್ಷ ಜನರು ಕೆಲಸ ಹುಡುಕಿಕೊಳ್ಳುವಂತಾಯಿತು. 1979-80ರ ಕಾರ್ಯಕ್ರಮ ಅಷ್ಟೇ ತಿಂಗಳುಗಳಲ್ಲಿ 15 ಲಕ್ಷ ಜನರಿಗೆ ಕೆಲಸ ಕೊಡುತ್ತದೆ.

ಕೊನೆಗೆ ದುಡಿಯುವ ವರ್ಗಗಳ ಅಗಾಧ ಬೆಂಬಲ ಮತ್ತು ಸಹಕಾರಗಳೇ ವಾಮರಂಗ ಸರ್ಕಾರದ ಚೇತನವಾಗಿದೆ ಎನ್ನಬಹುದು. ಅವರ ಸಹಕಾರದಿಂದ ಸರ್ಕಾರ ಅನೇಕ ಸಾಧನೆಗಳನ್ನು ಮಾಡಿ, ವಿರೋಧಿಗಳ ಪಿತೂರಿಗಳನ್ನು ಉರುಳಿಸಿದೆ. ಜನಶಕ್ತಿಗಳ ಬೆಂಬಲದಿಂದ ಬಲವಾಗಿ ಅದು ಮುಂಬರುವ ವರ್ಷಗಳಲ್ಲಿ ಪ್ರಗತಿ ಸಾಧಿಸುತ್ತದೆ. ●

ತಾತಗುಣಿ ಎಸ್ಟೇಟ್ ಕಾರ್ಮಿಕರು ಹೋರಾಟದ ಹಾದಿಯಲ್ಲಿ

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಕನಕಪುರ ರಸ್ತೆ ಬದಿಯ ಎಂಟುನೂರು ಎಕರೆ ವಿಸ್ತೀರ್ಣದ ತಾತಗುಣಿ ಎಸ್ಟೇಟಿಗೆ ದೇವಿಕಾರಾಣಿ ರೋರೀಚ್‌ರವರು ಮಾಲಕರಾಗಿರುವರು. ಸಿ.ಐ.ಟಿ.ಯು. ನೇತೃತ್ವದಲ್ಲಿ ಈ ಎಸ್ಟೇಟಿನ ನೂರೈವತ್ತು ಜನ ಕಾರ್ಮಿಕರನ್ನು ಬೆಂಗಳೂರು ದಕ್ಷಿಣ ತಾಲ್ಲೂಕು ಎಸ್ಟೇಟ್ ಮತ್ತು ಫಾರಂ ಕೆಲಸಗಾರರ ಸಂಘದ ಹೆಸರಲ್ಲಿ ಸಂಘಟಿಸಲಾಗಿದೆ. ಈ ಹಿಂದೆ ಹೋರಾಟಮಾಡಿದ್ದರ ಪರಿಣಾಮವಾಗಿ ರೋರೀಚ್‌ರವರು ಒಂದು ಒಪ್ಪಂದ ಮಾಡಿಕೊಂಡು, ಕೆಲಸದಿಂದ ವಜಾ ಆಗಿದ್ದ ಕಾರ್ಮಿಕರನ್ನು ಮತ್ತೆ ಹಿಂದೆ ತೆಗೆದುಕೊಂಡು, ಉಳಿದ ಸಮಸ್ಯೆಗಳನ್ನು ಮುಂದೆ ಒಂದುವಾರದೊಳಗೆ ಮಾತುಕತೆಮಾಡಿ ಬಗೆಹರಿಸಿಕೊಳ್ಳುವುದಾಗಿ ಹೇಳಿದ ಪ್ರಕಾರ ಹೋರಾಟವನ್ನು ನಿಲ್ಲಿಸಲಾಗಿತ್ತು.

ಆದರೆ ರೋರೀಚ್‌ರವರು ಕೊಟ್ಟ ಭರವಸೆ ಪ್ರಕಾರ ನಡೆಯದಿರುವುದರಿಂದ, 18-7-79 ರೊಳಗೆ ಬೇಡಿಕೆಗಳಿಗೆ ಪರಿಹಾರ ಸಿಗದಿದ್ದರೆ ಅನಿರ್ದಿಷ್ಟ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥ ಅವರು ತಿಳಿಸಿರುವರು. ●

ಕಾರ್ಮಿಕ ಪ್ರದರ್ಶಕರ ಮೇಲೆ ಪೋಲೀಸರ ಹಲ್ಲೆ

ಬೆಂಗಳೂರಿಗೆ 27 ಕಿ. ಮಿ. ದೂರದ ಬಳ್ಳಾರಿ ರೋಡಿನಲ್ಲಿರುವ, ಡಬ್ಲ್ಯು. ಎಸ್. ಇನ್‌ಸುಲೇಟರ್ ಕಾರ್ಖಾನೆಯ ಕಾರ್ಮಿಕರು ಮುಷ್ಕರ ಹೂಡಿದ್ದು ಇಂದಿಗೆ 52 ದಿನಗಳಾದವು. ತಾರೀಖು 11-7-79 ರಂದು ಶಾಂತಯುತವಾಗಿ ಕಾರ್ಮಿಕರು ಮತಪ್ರದರ್ಶನ ಮಾಡುತ್ತಿದ್ದಾಗ ಪೋಲೀಸರು ಮಧ್ಯ ಪ್ರವೇಶಿಸಿ ಕಾರ್ಮಿಕರ ಸಂಘಟನೆಯನ್ನು ಮುರಿಯಲು ಕಾಂ. ಕುಲಕರ್ಣಿ, ಕಾರ್ಮಿಕ ಮುಖಂಡ ಹಾಗೂ 52 ಜನ ಕಾರ್ಮಿಕರನ್ನು ವಿನಾಕಾರಣ ಬಂಧಿಸಿ ದೊಡ್ಡಬಳ್ಳಾಪುರಕ್ಕೆ ಕೊಂಡುಹೋಗಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿದರು.

ಹಿಂದೆ ತಾರೀಖು 22-5-79 ರಂದು, ಕಾರ್ಮಿಕರು ಮ್ಯಾನೇಜುಮೆಂಟಿಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ ನೋಟೀಸ್ ಕೊಟ್ಟು ಬೇಡಿಕೆ ಈಡೇರುವವರೆಗೆ ಕಾರ್ಖಾನೆಯ ಒಳಗೆ, "ಸ್ಟೇ ಇನ್ ಸ್ಟ್ರೈಕ್" ಮಾಡುವುದೆಂದು ನಿರ್ಧರಿಸಿ ಮುಷ್ಕರ ನಡೆಸಿದರು. ಆಗಲೂ ಮಾಲೀಕರು, ಪೋಲೀಸರು ಮಧ್ಯ ಪ್ರವೇಶಿಸಿ ಕಾರ್ಮಿಕರನ್ನು ನಾಲ್ಕು ದಿನಗಳ ಹಸಿವಿನ ದವಡೆಗೆ ತಳ್ಳಿದರು. ಆದರೂ ದೃತಿಗೆಡದೆ ಕಾರ್ಮಿಕರು ಶಾಂತಯುತವಾಗಿ ಮುಷ್ಕರ ಮಾಡುತ್ತಿದ್ದ ಕಾರ್ಮಿಕರ ನೆರವಿಗೆ ಬಂದ ಬೇರೆ ಕಾರ್ಮಿಕರಿಗೆ ಪೋಲೀಸರು ಗುಂಡಿನ ಬೆದರಿಕೆ ಹಾಕಿದರು. ಅವರೇ ಇಂದು ವಿನಾಕಾರಣ ಕಾರ್ಮಿಕರ ಮೇಲೆ ಹಲ್ಲೆ ನಡೆಸಿ ಬಂಧಿಸಿದರು.

ನಂತರ ದೊಡ್ಡಬಳ್ಳಾಪುರದ ಮ್ಯಾಜಿಸ್ಟ್ರೇಟ್ ಮತ್ತು ತಹಸೀಲ್‌ದಾರ್‌ರವರ ಸಹಾಯದಿಂದ ಕಾರ್ಖಾನೆಯ ಬಳಿ ಮತ್ತು ಸುತ್ತು ಮುತ್ತಲೂ ಶಾಂತಿಗೆ ಭಂಗವಾಗಿದೆ ಎಂಬ ನೆಪದಿಂದ 7 ದಿನಗಳ ತನಕ 114ನೇ ಸೆಕ್ಷನ್ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿಸಿರುವರು.

ಕಾರ್ಮಿಕ ಮತ್ತು ಮಾಲೀಕರ ನಡುವೆ ಇರುವ ತಗಾದೆಯಲ್ಲಿ ಮಾಲೀಕರ ಪರವಾಗಿ ಪೋಲೀಸರ ಪ್ರವೇಶ ಖಂಡನಾರ್ಹವಾದುದು. ಮಾಲೀಕರನ್ನು ಲೇಬರ್ ಕಮೀಷನರ್ ಮಾತುಕತೆಗೆ ಕರೆದಾಗ್ಯೂ ಮಾಲಕರು ಬಂದಿಲ್ಲ. ಆದರೆ ಇವರ ಮೇಲೆ ಏನು ಕ್ರಮವಿಲ್ಲ. ಇವರಿಗೆ ಪೋಲೀಸು, ಸರಕಾರದ, ಬೆಂಬಲದಿಂದ ಇನ್ನಷ್ಟು ಬೆಂಬಲ ಕೊಟ್ಟಂತಾಗಿದೆ.

ದೇಶದಲ್ಲಿ ಪೋಲೀಸರು ಸಂಘಟಿತರಾಗುತ್ತಿರುವ ಈ ಸಂದರ್ಭದಲ್ಲಿ ಅವರೇ ಮಾಲೀಕರ ಪರವಾಗಿ ನಿಂತು ಕಾರ್ಮಿಕರ ನ್ಯಾಯಬದ್ಧವಾದ ಹೋರಾಟವನ್ನು ದಮನಮಾಡತೊಡಗಿರುವುದು ಒಂದು ವಿಪರ್ಯಾಸ. ●

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಕೋಲಾರ ಜಿಲ್ಲಾ ರೈತ ಸಂಘ ಸಮಿತಿ ಸಭೆ

ಕೋಲಾರ ಜಿಲ್ಲಾ ರೈತಸಂಘದ ಕಾರ್ಯಕಾರಿ ಸಮಿತಿಸಭೆಯು ಕಾಂ. ಲಕ್ಷ್ಮಣರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಜಿಲ್ಲಾ ಕಾರ್ಯದರ್ಶಿ ಕಾಂ. K. M. ವೆಂಕಟೇಶ್‌ರವರು ವರದಿಯನ್ನು ನೀಡಿದ ನಂತರ, ವರದಿಯ ಮೇಲೆ ದೀರ್ಘ ಚರ್ಚೆ ನಡೆದನಂತರ ಈ ಕೆಳಕಂಡ ತೀರ್ಮಾನಗಳನ್ನು ಅಂಗೀಕರಿಸಲಾಯಿತು.

1. ಜಿಲ್ಲಾ ರೈತಸಂಘದ ಸಮ್ಮೇಳನವನ್ನು 2-9-79ರಿಂದ 3-9-79 ರವರೆವಿಗೆ ಎರಡು ದಿನಗಳ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಲಾಯಿತು.

2. ಹಳಿಯಾಳದ ಪೋಲೀಸ್ ಗೋಲಿಬಾರ್‌ನಲ್ಲಿ ಮೃತಪಟ್ಟ ಕಾಂ. ಮಾರುತಿಗಣೇಶಪವಾರ್‌ರವರ ಕುಟುಂಬಕ್ಕೆ ಧನ ಸಹಾಯ ಮಾಡಬೇಕೆಂದು ತೀರ್ಮಾನಿಸಲಾಯಿತು.

3. ಹರಿಜನ-ಗಿರಿಜನರ ದರಖಾಸ್ತು ಜಮೀನುಗಳು, ಹಾಗೂ ತೋಟಿ, ತಳವಾರು, ನೀರುಗಂಟಿ ಇನಾಮ್ತಿ ಜಮೀನುಗಳು ಈಗಾಗಲೇ ಪರಭಾರೆಯಾಗಿರುವುದನ್ನು, ಸರ್ಕಾರ ಕೂಡಲೇ ಸದರಿ ಜಮೀನುಗಳನ್ನು ಕಳೆದುಕೊಂಡವರಿಗೆ ಸ್ವಾಧೀನಪಡಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

4. ಬೆಂಗಳೂರು-ಬಂಗಾರುಪೇಟೆ ಮಧ್ಯ ಯಲಹಂಕ, ದೇವನಹಳ್ಳಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಶ್ರೀನಿವಾಸಪುರ, ಮತ್ತು ಕೋಲಾರ ಮಾರ್ಗವಾಗಿ ಹೋಗುವ ನ್ಯಾರೋಗೇಜ್ ರೈಲು ಸಂಚಾರವನ್ನು ಈಗಾಗಲೇ ಕೇಂದ್ರ ಸರ್ಕಾರ ರದ್ದು ಮಾಡಿದ್ದು, ಜನಸಾಮಾನ್ಯರಿಗೆ, ರೈತರಿಗೆ, ಸಣ್ಣಸಣ್ಣ ವ್ಯಾಪಾರಸ್ಥರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಪ್ರವಾಸಿಗರಿಗೆ ತುಂಬಾ ಅನಾನುಕೂಲವಾಗಿರುವುದರಿಂದ, ಸದರಿ ಲೈನನ್ನು ಮೀಟರ್ ಗೇಜ್ ಎಂದು ಪರಿವರ್ತಿಸಿ ರೈಲುಸಂಚಾರವನ್ನು ಮುಂದುವರಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ತೀರ್ಮಾನಿಸಲಾಯಿತು.

○

........ರಾಷ್ಟ್ರೀಯ ಸಮಾವೇಶ

[ಒಂದನೇ ಪುಟದಿಂದ]

ಈ ಪರಿಸ್ಥಿತಿಯಲ್ಲಿ ಸರಕಾರವು ಹಿಂದಿನ ಕಾಂಗ್ರೆಸ್ ಸರಕಾರದಂತೆ ಕಾರ್ಮಿಕ ವಿರೋಧಿ ಕ್ರಮಗಳನ್ನು ಅನುಸರಿಸುವುದು ಸ್ಪಷ್ಟವಾಗಿದೆ. ಸರಕಾರದ ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಐಕ್ಯಕಾರ್ಯಾಚರಣೆಯನ್ನು ರೂಪಿಸುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಸೇರುತ್ತಲಿರುವ ರಾಷ್ಟ್ರೀಯ ಸಮಾವೇಶವು ಬಹಳ ಮಹತ್ವವುಳ್ಳದ್ದಾಗಿದೆ. ರಿಸರ್ವ್ ಬ್ಯಾಂಕ್ ನೌಕರರ ಹೋರಾಟವನ್ನು ನಿಷೇಧಿಸುವ, ಕಡ್ಡಾಯ ಠೇವಣಿ ತುಟ್ಟಿಬತ್ತೆ ಮರುಪಾವತಿಯನ್ನು ತಡೆಹಿಡಿಯುವಂತಹ ಸುಗ್ರೀವಾಜ್ಞೆಗಳನ್ನು ಮಾಡಿರುವ ಮೊರಾರ್ಜಿ ಸರಕಾರವು ಈಗ ಉರುಳಿರುವುದಾದರೂ ಈ ಕಠಿಣ ಕಾಯ್ದೆಗಳು ಹಾಗೆಯೇ ಇವೆ.

ಆಳುವ ವರ್ಗ ಮತ್ತು ಸರಕಾರವು ಕಾರ್ಮಿಕ ವರ್ಗದ ಮೇಲೆ ನಡೆಸುತ್ತಲಿರುವ ಆಕ್ರಮಣದ ವಿರುದ್ಧ ಐಕ್ಯಚಳುವಳಿಯನ್ನು ಬೆಳೆಸುವುದರಲ್ಲೂ, ಸಮಸ್ಯೆಗಳ ಪರಿಹಾರಗಳ ಬಗ್ಗೆ ಹೋರಾಡುವುದಕ್ಕೂ ಸಮಾವೇಶವು ಮಾರ್ಗದರ್ಶನ ಕೊಡಲಿದೆ. ಸಂಘಟಿತ ಕಾರ್ಮಿಕರನ್ನು ಮತ್ತು ಅಸಂಘಟಿತ ಕಾರ್ಮಿಕರನ್ನು ಬೇರ್ಪಡಿಸುವ ಆಳುವ ವರ್ಗಗಳ ಪಿತೂರಿಯ ವಿರುದ್ಧ ಎಲ್ಲಾ ಕಾರ್ಮಿಕರ ಒಗ್ಗಟ್ಟು ಬೆಳೆಸುವತ್ತವೂ ಸಮಾವೇಶವು ಚರ್ಚಿಸಿ, ಕ್ರಮ ತೆಗೆದುಕೊಳ್ಳುವುದೆಂದು ಆಶಿಸಲಾಗಿದೆ.

ಸುಮಾರು 600 ಕ್ಕಿಂತಲೂ ಹೆಚ್ಚಿಗೆ ಪ್ರತಿನಿಧಿಗಳು ಬಂದಿರುವ, ಸಮಾವೇಶದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿ. ಐ. ಟಿ. ಯು, ಎ. ಐ. ಟಿ. ಯು. ಸಿ, ಎಚ್. ಎಮ್. ಎಸ್, ಯು. ಟಿ. ಯು. ಸಿ, ಬೇರೆ ಬೇರೆ ಕೇಂದ್ರ ಕಾರ್ಮಿಕ ಸಂಘಗಳ ಫೆಡರೇಷನ್ನುಗಳ ಮುಖಂಡರುಗಳು ಭಾಗವಹಿಸುತ್ತಲಿದ್ದಾರೆ. ○

ಅವಿಶ್ವಾಸ ನಿರ್ಣಯದ ಮೇಲೆ......

[ಒಂದನೇ ಪುಟದಿಂದ]

ನಿರ್ಣಯದ ಮೇಲೆ ಚರ್ಚೆ ನಡೆಯುವಾಗಲೂ, ಲೋಕಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಂಡದ ಮುಂದಾಳು ಕಾಂ. ಸಮರ ಮುಖರ್ಜಿಯವರು ಸರಕಾರದ ವೈಫಲ್ಯಗಳ ಬಗ್ಗೆ ಎತ್ತಿ ತೋರಿಸಿದರು. ಇದರ ಬಗ್ಗೆ ಏನೂ ಪ್ರತಿಕ್ರಿಯೆ ಇಲ್ಲದ್ದು ಮಾತ್ರವಲ್ಲ ಸರಕಾರದ ವಕ್ತಾರರು ಸರಕಾರದ ಧೋರಣೆಗಳನ್ನು ಸಮರ್ಥಿಸಿರುವರು. ಇವೆಲ್ಲವುಗಳಿಂದ ದೇಸಾಯಿ ಸರಕಾರಕ್ಕೆ ತನ್ನ ಕಾರ್ಯಕ್ರಮ ಮತ್ತು ಕೆಲಸಗಳನ್ನು ಉತ್ತಮಗೊಳಿಸಲು ಇಚ್ಛೆಯಿಲ್ಲ ಎಂಬುದು ಸ್ಪಷ್ಟ ಎಂಬುದಾಗಿ ಪೊಲಿಟ್ ಬ್ಯೂರೋವು ಅಭಿಪ್ರಾಯ ಮಾಡಿದೆ. ಈ ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಡಲು ಲೋಕಸಭೆಯಲ್ಲಿರುವ ತನ್ನ ಸದಸ್ಯರುಗಳಿಗೆ ಆದೇಶ ನೀಡುತ್ತದೆ.

●

ಸಾಲ ವಸೂಲಿ ರದ್ದತಿಗೆ ರೈತಸಂಘದ ಒತ್ತಾಯ

ಕರ್ನಾಟಕ ಪ್ರಾಂತದಲ್ಲಿ ಈವರೆಗೆ ಮಳೆ ಆಗದೆ ಗ್ರಾಮಾಂತರ ಪ್ರದೇಶದ ಜನರ ಸ್ಥಿತಿಗತಿ ಚಿಂತಾಜನಕವಾಗಿದೆ. ಕರಾವಳಿ ಮತ್ತು ಘಟ್ಟಪ್ರದೇಶಗಳು ಬಿಟ್ಟರೆ ಕರ್ನಾಟಕದ ಒಳಭಾಗದ ಯಾವುದೇ ಪ್ರದೇಶದಲ್ಲಿಈ ವರೆಗೆ ಮಳೆ ಆಗಿರುವುದಿಲ್ಲ. ಮಳೆನೀರಿನ ಆಶ್ರಯದ ಬೆಳೆಗಳಿಗೆ ಈಗಾಗಲೇ ತಿಂಗಳು ತಡವಾಗಿದೆ. ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ, ಮೈಸೂರು, ಇನ್ನೂ ಇತರೆ ಕೆಲವು ಜಿಲ್ಲೆಗಳಿಂದ ನಮಗೆ ಬಂದಿರುವ ವರದಿ ಪ್ರಕಾರ ಅನೇಕ ಕಡೆಗಳಲ್ಲಿ ಭೂಮಿಯ ಉಳುಮೆಕೂಡ ಪೂರೈಸಿಲ್ಲ. ಕೃಷಿಕಾರ್ಮಿಕರಿಗೆ ಈಗಾಗಲೇ ಒಂದೆರಡು ತಿಂಗಳಿಂದ ಕೂಲಿ ಕೆಲಸ ಇಲ್ಲದೆ, ಸೊಪ್ಪುಸೊದೆ ಗೆಡ್ಡೆಗೆಣಸು ತಿಂದು ಜೀವಿಸಬೇಕಾಗಿದೆ. ಸಣ್ಣ ಹಾಗು ಮಧ್ಯಮ ತರಗತಿ ರೈತರೂ ತುಂಬಾ ಕಷ್ಟಕ್ಕೀಡಾಗಿದ್ದಾರೆ. ಅನೇಕ ಕಡೆಗಳಲ್ಲಿ ದನಕರುಗಳಿಗೆ ಮೇವು ನೀರಿಗೆ ಕಷ್ಟವಾಗಿದೆ. ಕುಡಿಯುವ ನೀರಿನ ಅಭಾವವೂ ಬಹುಭಾಗದಲ್ಲಿ ಉಂಟಾಗಿದೆ. ಈಗಾಗಲೇ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿರುವ ರೈತರು, ನೀರು ತೆರಿಗೆ ಕಂದಾಯದ ವಸೂಲಿ ಜೊತೆಗೆ ಭೂಅಭಿವೃದ್ಧಿ ಬ್ಯಾಂಕಿನವರ ಸಾಲದ ಕಡ್ಡಾಯ ವಸೂಲಿಯಿಂದ ತತ್ತರಿಸಿಹೋಗಿದ್ದಾರೆ. ನೀರಿಗಾಗಿ ರೈತ ಪರಿತಪಿಸುತ್ತಿರುವಾಗ ಭೂಅಭಿವೃದ್ಧಿ ಬ್ಯಾಂಕಿನವರು ನೀರಾವರಿ ಪಂಪುಸೆಟ್ಟನ್ನ ಜಪ್ತಿಮಾಡಿ ಕಿತ್ತುಕೊಂಡು ಹೋಗುವ ಕಾರ್ಯಕ್ರಮ ಲೀಲಾಜಾಲವಾಗಿ ನೆಡೆಯುತ್ತಿದೆ. ರೈತನ ಬೆಳೆನಾಶ ಮಾಡುವ,ಪಂಪು ಸೆಟ್ಟು ಜಪ್ತಿಮಾಡುವ ಕೆಲಸ ಕಾನೂನು ಬಾಹಿರವಾಗಿದ್ದರೆ, ಇಂಥಾ ಕಷ್ಟಕಾಲದಲ್ಲಿ ಇದೆಲ್ಲಾ ನಡೆಯುತ್ತಿದ್ದರೂ ಇದನ್ನು ನೆಡೆಸಿದವರ ಮೇಲೆ ಉಗ್ರಕ್ರಮ ಕೈಗೊಳ್ಳುವುದು ಬಿಟ್ಟು ಸರ್ಕಾರ ಮೂಕ ಪ್ರೇಕ್ಷಕವಾಗಿದೆ. ಈ ಅನ್ಯಾಯಕ್ಕೆ ಸರ್ಕಾರ ಪರೋಕ್ಷವಾಗಿ ಬೆಂಬಲಿಸಿ ಬಡರೈತನ ಬೆಳೆ ನಾಶಮಾಡಿದಂತಾಗುತ್ತೆ. ಬಡರೈತರ ರಕ್ಷಣೆಗಾಗಿ ಸರ್ಕಾರ ಕೂಡಲೇ ಈ ಕಾರ್ಯಕ್ರಮ ಕೈಗೊಳ್ಳಬೇಕು. 1) ಸದ್ಯಕ್ಕೆ ಯಾವುದೇ ಸಹಕಾರ ಸಂಘ ಬ್ಯಾಂಕು ಮತ್ತು ಸರ್ಕಾರ ಬಡರೈತರ ಸಾಲದ ವಸೂಲಿಯನ್ನು ರದ್ದು ಮಾಡಬೇಕು. 2) ಬಡರೈತ ತೆರಜೇಕಾಗಿರುವ ನೀರಾವರಿ ತೆರಿಗೆ ರದ್ದು ಮಾಡಬೇಕು. 3) ಕೃಷಿಕಾರ್ಮಿಕರಿಗೆ ಕೂಲಿ ದೊರಕುವಂತೆ ಸರ್ಕಾರ ಯಾವುದಾದರೂ ಕಾಮಗಾರಿ ಪ್ರಾರಂಭಿಸಬೇಕು. 4) ಬಡರೈತರಿಗೆ ಉಚಿತವಾಗಿ ಬಿತ್ತನೆ ಒದಗಿಸಬೇಕು. 5) ದನಕರುಗಳಿಗೆ ಮೇವುಕೊಳ್ಳಲು ಮತ್ತು ಗೊಬ್ಬರಕೊಳ್ಳಲು ಬಡರೈತರಿಗೆ ಅಲ್ಪಾವಧಿ ಸಾಲ ಒದಗಿಸಬೇಕು ಎಂದು ಪ್ರಾಂತ ರೈತಸಂಘದ ಅಧ್ಯಕ್ಷರಾದ ಕಾಂ. ಎಚ್. ಮುಗವಾಳಪ್ಪನವರು ಸರಕಾರವನ್ನು ಒತ್ತಾಯಿಸಿರುವರು.

ಸೂಚನೆ

ಪುಟ 2ರಲ್ಲಿ 'ಮಾತೃಭಾಷೆಗೆ ಪ್ರಾಧಾನ್ಯತೆ ಅವಶ್ಯ'-ಎಂಬ ಲೇಖನದಲ್ಲಿ. ಭಾರತ ವಿದ್ಯಾರ್ಥಿ ಫೆಡರೇಷನ್ ಎಂಬುದರ ಬದಲಾಗಿ ಫೆಡರೇಷನ್ ಎಂದು ಅಚ್ಚಾಗಿದೆ. ಇದನ್ನು ಎಸ್. ಎಫ್. ಐ. ಎಂದು ಓದಿರಿ.

ಸಂಪಾದಕೀಯ

[ಒಂದನೇ ಪುಟದಿಂದ]

ಇಂದಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸುವುದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯಿಂದ ಮಾತ್ರ ಸಾಧ್ಯ ಎಂಬುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ. ಸಿ. ಪಿ. ಐ, ಆರ್. ಎಸ್. ಪಿ, ಪಿ.ಡಬ್ಲ್ಯು. ಪಿ. ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳ ಮುಖಂಡರುಗಳು ಜಂಟಿ ಹೇಳಿಕೆಯನ್ನಿತ್ತಿರುವರು. ಲೋಕಸಭೆಯಲ್ಲಿ ಒಟ್ಟು 42 ಸದಸ್ಯರ ಬಲವಿರುವ ಈ ಎಡಪಕ್ಷಗಳು ಪಾರ್ಲಿಮೆಂಟಿನ ಒಳಗೂ ಹೊರಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ಶ್ರಮಿಸಲು ತೀರ್ಮಾನಿಸಿವೆ. ಸರ್ವಾಧಿಕಾರ ಮತ್ತು ಕೋಮು ಶಕ್ತಿಗಳಿಗೆ ವಿರೋಧವಿರುವ ಸರಕಾರವನ್ನು ರಚಿಸುವುದಕ್ಕೂ ಸಹಕಾರ ಕೊಡಲು ಎಡಪಕ್ಷಗಳು ನಿರ್ಣಯಿಸಿವೆ. ಪ್ರಸ್ತುತ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಎಡಪಕ್ಷಗಳ ಐಕ್ಯಕಾರ್ಯಾಚರಣೆಯು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಧ್ರುವೀಕರಣಕ್ಕೆ ಅನುಕೂಲ ವಾತಾವರಣವನ್ನು ಉಂಟುಮಾಡಬಲ್ಲುದು.

ಯಾರೇ ಸರಕಾರ ರಚಿಸಿದರೂ, ಅದು ಹೆಚ್ಚು ಸಮಯವಿರದೆ ಬೇಗನೆ ಚುನಾವಣೆ ನಡೆಯುವ ಸಾಧ್ಯತೆಗಳಿದ್ದರೆ, ಯಾರಿಗೂ ಸರಕಾರ ರಚಿಸುವುದು ಆಗದಿದ್ದಲ್ಲಿ ಕೂಡಲೇ ಚುನಾವಣೆ ನಡೆಸಬೇಕಾಗುವುದು. ಈ ಎಲ್ಲ ಅನಿಶ್ಚಿತತೆಗಳ ಹಿನ್ನೆಲೆಯಲ್ಲಿ ಸರ್ವಾಧಿಕಾರ ಶಕ್ತಿಗಳು ನೆರೆರಾಷ್ಟ್ರಗಳಲ್ಲಿನ ಬೆಳವಣಿಗೆಗಳಿಗೆ ಇಲ್ಲೂ ಪ್ರೋತ್ಸಾಹ ಕೊಡುವುದನ್ನು ತಾತ್ವಿಕವಾಗಿ ಅಲ್ಲಗಳೆಯುವಂತಿಲ್ಲ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಎಚ್ಚರದಿಂದಿರುವುದು ಅವಶ್ಯ. ○

ಅಭಿನಂದನೆ

ಜನತಾ ಪಕ್ಷದ ನೀತಿಗೆ, ಅದರ ಕಾರ್ಮಿಕ ವಿರೋಧಿ ನೀತಿಗೆ, ಕಡ್ಡಾಯ ಠೇವಣಿ ವಿಷಯದಲ್ಲಿ, ರೈಲ್ವೆ ಕಾರ್ಮಿಕರ ಬೋನಸ್ ವಿಷಯದಲ್ಲಿ, ಬಡ್ಜೆಟ್ ಸಂಬಂಧದಲ್ಲಿ ಜನತಾ ಪಕ್ಷದ ಮುಖಂಡರ ಕಾರ್ಯದಿಂದ ಬೇಸತ್ತು ಕಾರ್ಮಿಕರಿಗೆ ಆಗುವ ಅನ್ಯಾಯವನ್ನು ಸಹಿಸದೆ ಕಾರ್ಮಿಕ ಪಕ್ಷವಾದ ಸಿ. ಪಿ. ಐ. (ಎಂ.) ಪಕ್ಷವು ಜನತಾಪಕ್ಷಕ್ಕೆ ಬೆಂಬಲಕೊಡುವುದಿಲ್ಲ ಎಂಬುದನ್ನು ಕೇಳಿ ಬಹಳ ಸಂತೋಷವಾಯಿತು. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲ ಹಾಗೂ ಅಭಿನಂದನೆಗಳು.

ಡಿ. ಚಂದ್ರಶೇಖರ್, ಹರಿಹರ.

ಪರಿಸರ

ಭಾರತವು 1652 ಮಾತೃಭಾಷೆಗಳ ಬಹುಭಾಷೆ ರಾಷ್ಟ್ರವಾಗಿದೆ. ಸಾಕ್ಷರತೆ ಹರಡುವುದರಲ್ಲಿ ಇದು ಗೆಲ್ಲಲಾಗದ ಸಮಸ್ಯೆಗಳನ್ನೊಡ್ಡುತ್ತದೆ. ಪ್ರಾಸಂಗಿಕವಾಗಿ, ದೇಶವು ಹೆಚ್ಚುಕಡಿಮೆ ವಿಶ್ವದ ಶೇಕಡಾ 50ರಷ್ಟು ಅನಕ್ಷರಸ್ಥರನ್ನು ಹೊಂದಿದೆ.

—ಸಾಪ್ತಾಹಿಕ ಪುರವಣಿ,
ಪ್ರಜಾವಾಣಿ.

ದೇವರುಗಳು ಸ್ವತಂತ್ರವಲ್ಲ, ಅವುಗಳು ಸಮಾಜದಲ್ಲಿರುವ ಅನೇಕ ನಿಯಂತ್ರಿತ ಶಕ್ತಿಗಳಿಗೆ ಒಳಗಾಗಿವೆ. ಬಡವ ಶ್ರೀಮಂತ ಎಂಬ ಭಾವನೆ ದೇವರುಗಳನ್ನೂ ಬಿಟ್ಟಿಲ್ಲ.

—ಸಿದ್ಧಲಿಂಗಯ್ಯ
ದಲಿತ ಕವಿ.

ಮೊದಲಿಗೆ ನಾನು ಸಮಾಜವಾದಿ ಪಕ್ಷದಲ್ಲಿದ್ದೆ ನಂತರ ಸ್ವತಂತ್ರ ಶಾಸಕನಾದೆ, ತುರ್ತುಪರಿಸ್ಥಿತಿಯ ಅವಧಿಯಲ್ಲಿ ಕಾಂಗ್ರೆ ಸೇರಿದೆ. ಎ.ಐ.ಸಿ.ಸಿ.ಯಲ್ಲಿ ಸದಸ್ಯನಲ್ಲದಿದ್ದರೂ ಕೆ.ಪಿ.ಸಿ.ಸಿ. ಅಧ್ಯಕ್ಷನಾಗಿ ಆಯ್ಕೆಯಾಗಲು ಹೇಗೆ ಸಾಧ್ಯವಾಯಿತೆಂದು ನೀವು ಪ್ರಶ್ನಿಸುವುದಿದ್ದರೆ ನನಗಿಂತ ಮೇಲಿನ ಅಧಿಕಾರಿಗಳಿಗೆ ಕೇಳಿ.

—ಎಸ್. ಬಂಗಾರಪ್ಪ
ಕರೆಂಟ್ ಪ್ರತಿನಿಧಿ ಅಯೂಬ್ ಸೈಯದ್‌ರವರ ಸಂದರ್ಶನದಲ್ಲಿ

ಆಳುವ ಪಕ್ಷದೊಳಗಿನ ಆರ್.ಎಸ್.ಎಸ್. ವಿರೋಧಿ ಚಳುವಳಿ ಮತ್ತು ವಿರೋಧಿ ಪಕ್ಷೀಯರ ಗುಂಪಿನಿಂದ ಕಾಂಗ್ರೆಯ ಪ್ರತ್ಯೇಕತೆಯ ಗತಿಯು ಸಮಾನಾಂತರದಲ್ಲಿರುವುದು, ಈ ಅಂತರವನ್ನು ಶೀಘ್ರವಾಗಿ ನಿವಾರಿಸದಿದ್ದಲ್ಲಿ, ಪರಸ್ಪರ ವಿರೋಧಿಗಳಾಗಿರುವ ಕಾಂಗ್ರೆ ಆರ್.ಎಸ್.ಎಸ್.ಗಳು ಜತೆಗೂಡುವ ಸಾಧ್ಯತೆಗಳೇ ಅದಿಕ,

—ಆಶಾವಾದಿ
ವಾರಪತ್ರಿಕೆ.

ಐಕ್ಯತೆಯನ್ನು ಅಪೇಕ್ಷಿಸುವ ಈ ಕಾಂಗ್ರೆಸ್ಸಿಗರು ವ್ಯಾಪಕ ಪ್ರಮಾಣದ ಅಧಿಕಾರ ರುಚಿಯನ್ನುಂಡವರು, ಇಂದಿರಾ ಸಂಜಯರ 'ತುಘಲಕ್ ದರ್ಬಾರಿಗೆ'-ಮೌನ ಸಮ್ಮತಿಯನ್ನಿತ್ತ ಇವರು ಒಂದಾಗಿ ಮತ್ತೆ ಗದ್ದುಗೆ ಏರಲು ಹವಣಿಸುತ್ತಿದ್ದಾರೆ.

—ಪೃಥ್ವಿ
ವಾರಪತ್ರಿಕೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT